MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 243 | ಶುಕ್ರವಾರ : 11-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 243 | FRIDAY : 11-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಹೊಸ ಉದ್ಯೋಗ ಆಧಾರಿತ ಪ್ರೋತ್ಸಾಹಧನ: ನೀರಜ್ ಕುಮಾರ್



ಯುವ ಮಾರ್ಗ ಸುದ್ದಿ

**ರಾಯಚೂರು,ಜು.10**–ದೇಶದ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ದೇಶದ ಎಲ್ಲಾ ವಲಯಗಳಲ್ಲಿ ಉದ್ಯೋಗ ಸೃಷ್ಟಿ, ಉದ್ಯೋಗಾರ್ಹತೆ ಹಾಗೂ ಸಾಮಾಜಿಕ ಭದ್ರತೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಹೊಸ ಉದ್ಯೋಗ ಆಧರಿತ ಪ್ರೋತ್ಸಾಹಧನ (ಇಎಲ್ಐ) ಯೋಜನೆಗೆ ಅನುಮೋದನೆ ನೀಡಿದೆ ಎಂದು ರಾಯಚೂರು ವಿಭಾಗೀಯ ಇಪಿಎಫ್ ಪ್ರಾದೇಶಿಕ ಆಯುಕ್ತರಾದ ನೀರಜ್ ಕುಮಾರ್ ಪ್ರಸಾದ್ ಅವರು ಹೇಳಿದರು.

ಗುರುವಾರದಂದು ನಗರದ ಪ್ರಾದೇಶಿಕ ನೌಕರರ ಭವಿಷ್ಯ ನಿಧಿ ಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಉತ್ಪಾದನಾ ವಲಯದ ಮೇಲೆ ವಿಶೇಷ ಒತ್ತು ನೀಡುವಂತೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಇದರಿಂದ ಉದ್ಯೋಗಾರ್ಹತೆಯು ಹೆಚ್ಚುವುದರ ಜೊತೆಗೆ ಮೂಲಕ ಇಪಿಎಫ್ಒ ನೇರವಾಗಿ ಹೊಸ ಉದ್ಯೋಗಿಗಳಿಗೆ(2ನೇಪುಟಕ್ಕೆ)

## ಕೆಪಿಎಂಇ ಕಾಯ್ದೆ ಸಮಗ್ರವಾಗಿ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ನಿತೀಶ್ ಕೆ. ಸೂಚನೆ


ಯುವ ಮಾರ್ಗ ಸುದ್ದಿ

**ರಾಯಚೂರು,ಜು.10**–ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ (ಕೆಪಿಎಂಇ) ಕಾಯಿದೆ ಈಗಾಗಲೇ ಜಾರಿಗೆ ಬಂದಿದ್ದು, ಅದನ್ನು ಜಿಲ್ಲೆಯಲ್ಲಿ ಸಮಗ್ರವಾಗಿ ಅನುಷ್ಠಾನಕ್ಕೆ ತರಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.




ಗುರುವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಪಿಎಂಇ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿಯಾಗಬೇಕು. ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದ ನಕಲಿ ವೈದ್ಯರು, ನರ್ಸಿ ಹಾಗೂ ನಡೆಸುವರು ವಿರುದ್ಧ ಕಾನೂನಿನ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಕಾಲ ಕಾಲಕ್ಕೆ ಕೆಪಿಎಂಇ ಸಭೆ ಸೇರಬೇಕು. ಸಂಬಂಧಿಸಿದ (2ನೇಪುಟಕ್ಕೆ)

## ವಚನಗಳಲ್ಲಿ ಸತ್ಯವಿರುವುದರಿಂದ ವಿಶ್ವಮಾನ್ಯವಾಗಿವೇ: ಶ್ರೀಗುರುಮಹಾಂತ ಸ್ವಾಮಿಗಳು




ಯುವ ಮಾರ್ಗ ಸುದ್ದಿ

**ಮಾನ್ವಿ,ಜು.10**–ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿ ಅಮರಶಿವ ಮಹಾಮನೆ ಶ್ರೀ ಗುರು ಮಹಾಂತ ಪ್ರವೇಶ ಹಾಗೂ ಬಸವತತ್ವ ಅನುಯಾಯಿಗಳಿಗೆ ಗೌರವ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಲಕಲ್ ಶ್ರೀಗುರು ಮಹಾಂತ ಸ್ವಾಮಿಗಳು ಅನುಭಾವದ ನುಡಿಗಳನ್ನಾಡಿ, 12 ನೇ ಶತಮಾನದಲ್ಲಿ ಬಸವಣ್ಣ ನವರ ಕಾಯಕ ,ದಾಸೋಹ , ಜಂಗಮತತ್ವಗಳಿಗೆ ಒಳಗಾದ ಶರಣರು ತಮ್ಮ ಜೀವನದಲ್ಲಿ ಕಂಡುಕೊಂಡ ಸತ್ಯವಾದ ಅನುಭವವನ್ನು ವಚನಗಳ ರೂಪದಲ್ಲಿ ನಮ್ಮಗೆ ನೀಡಿದ್ದಾರೆ. ಬಸವಣ್ಣ ನವರ ಹಾಗೂ ಶರಣರ ವಚನಗಳಲ್ಲಿ ಸತ್ಯವಿರುವುದರಿಂದ ಇಂದಿಗೂ ಕೂಡ ವಿಶ್ವದಧ್ಯಾಂತ ಇಂದು ವಚನಗಳನ್ನು ಹಾಗೂ ಅವುಗಳಲ್ಲಿನ ತತ್ವಗಳನ್ನು ಹೇಳುವ ಮೂಲಕ ವಚನಗಳು ಹಾಗೂ ಶರಣರು ಇಂದು ಶಾಶ್ವತವಾದ ಸ್ಥಾನವನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ. ಬಸವ ತತ್ವ ಅಭಿಮಾನಿಗಳು ಇಂದು ಮಾನವ ತವಾದಿಗಳಾಗಿದ್ದಾರೆ. ಇಂದಿಗೂ ಕೂಡ ಅನೇಕರು ತಮ್ಮ ಜೀವನದಲ್ಲಿ ಬಸವ ತತ್ವವನ್ನು ಅಳವಡಿಸಿಕೊಂಡು ಬಸವತತ್ವದ ಪ್ರಸಾರಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವುದಕ್ಕೆ ವಚನಗಳಲ್ಲಿರುವ ಅಂಶಗಳೇ ಕಾರಣವಾಗಿವೇ. ಇಂದಿನ ದಿನಗಳಲ್ಲಿ ಮೂಡ ನಂಬಿಕೆಗಳ ಪಾಲನೆ ಅಧಿಕಾವಾಗಿದೆ ಜ್ಯೋತೀಷ್ಯ, ಮೂಡಾಚಾರಣೆಗಳಿಗೆ ಒಳಗಾಗದೆ ಲಿಂಗಾಯತರು ಅಂಗದ ಮೇಲೆ ಇಷ್ಟಲಿಂಗವನ್ನು ಧಾರಣೆ ಮಾಡಿ ಕೊಂಡು ನಿಷ್ಠೆಯಿಂದ ಲಿಂಗವನ್ನು (2ನೇಪುಟಕ್ಕೆ)

## ರೈತರ ಮನವೊಲಿಕೆ ಯಶಸ್ವಿ : ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.10**– ಪಟ್ಟಣದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 150(ಎ) ನಿರ್ಮಾಣಕ್ಕೆ ಅಕ್ಕಪಕ್ಕದ ಜಮೀನುಗಳ ರೈತರ ಸಭೆ ಮಾಡುವಲ್ಲಿ ಯಶಸ್ವಿಯಾದ ಅಧಿಕಾರಿಗಳು ಪೋಲಿಸ್ ಪಹರೆಯಲ್ಲಿ ಗುರುವಾರ ಕಾಮಗಾರಿ ಆರಂಭಿಸಿದರು.



ವಿಶೇಷ ಭೂಸ್ವಾಧೀನ ಅಧಿಕಾರಿ ಶ್ರೀನಿವಾಸಗೌಡ ನೇತೃತ್ವದಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳ ತಂಡ, ರಸ್ತೆ ಹಾದು ಹೋಗಿರುವ ಜಮೀನುಗಳ ಮಾಲೀಕರನ್ನು ಒತ್ತಟ್ಟಿಗೆ ಸೇರಿಸಿ. ನಿಮಗೆ ಯಾವುದೇ ತೊಂದರೆ ಆಗದಂತೆ ಕಾಮಗಾರಿ ನಿರ್ವಹಿಸಲಾಗುವುದು. ಯಾವ ರೈತರಿಗೂ ಮೋಸ ಆಗಲು ಬಿಡುವುದಿಲ್ಲ. ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿಗದಿಪಡಿಸಿದ ಅಳತೆಯ ಸ್ಥಳಾವಕಾಶ ಮಾಡಿಕೊಡುವಂತೆ ಕೋರಿದರು. ಹೆಚ್ಚಿನ ಪರಿಹಾರ ಬೇಕಿದ್ದಲ್ಲಿ ನಿಯಮಾನುಸಾರ ಪಡೆಯಲು ಅವಕಾಶವಿದೆ ಎಂದು ರೈತರ ಮನವೊಲಿಸಿದರು.

ಲಿಂಗಸುಗೂರು ಪಟ್ಟಣದಿಂದ ಕಸಬಾಲಿಂಗಸುಗೂರುವರೆಗೆ 4 ಕಿ.ಮೀ. ಹೆದ್ದಾರಿ ಅಗಲೀಕರಣ ಕಾಮಗಾರಿ ಸ್ಥಗಿತಗೊಂಡಿತ್ತು. ರಸ್ತೆಯುದ್ದಕ್ಕೂ ತೆಗ್ಗು ಗುಂಡಿಗಳು ಬಿದ್ದು. ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿತ್ತು. ಜಮೀನು ಕಳೆದುಕೊಳ್ಳುವ ರೈತರು ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದರು. ವರ್ಷಗಳು ಉರುಳಿದರೂ ಸಮಸ್ಯೆಗೆ

## ರಾಜ್ಯದ ಶಾಲಾ ಮಕ್ಕಳಿಗೆ ದ್ವಿಭಾಷಾ ನೀತಿ ಅನುಷ್ಠಾನಕ್ಕೆ ಕರವೇ ಒತ್ತಾಯ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.10**–ರಾಜ್ಯದ ಶಾಲಾ ಮಕ್ಕಳಿಗೆ ದ್ವಿಭಾಷಾ ನೀತಿಯನ್ನು ಅನುಷ್ಠಾನಗೊಳಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಭಾಷಾ ಸಮತೋಲನಕ್ಕಾಗಿ ಕನ್ನಡವನ್ನು ಉಳಿಸಿಕೊಂಡು ಜೊತೆಗೆ ಇಂಗ್ಲಿಷ್‌ನಂತಹ ಜಾಗತಿಕ ಭಾಷೆಯಲ್ಲಿ ಮಕ್ಕಳಿಗೆ ಸಾಧನೆಯ ಅವಕಾಶ ನೀಡಬೇಕು. ಸ್ಥಳೀಯ ಮತ್ತು ಜಾಗತಿಕ ಜ್ಞಾನಕ್ಕಾಗಿ ಕನ್ನಡದಲ್ಲಿ ಶಾಲಾಭ್ಯಾಸವು ಮಕ್ಕಳಿಗೆ ಸಂಸ್ಕೃತಿ, ಇತಿಹಾಸ, ಮೌಲ್ಯಗಳನ್ನು ಅರಿಯುವಂತೆ ಮಾಡುತ್ತವೆ. ಇಂಗ್ಲಿಷ್ ಭಾಷೆ ಮಕ್ಕಳ ವೃತ್ತಿಪರತೆಯನ್ನು ವಿಶ್ವವ್ಯಾಪಿ ಪಸರಿಸುತ್ತದೆ. ಎರಡೂ ಭಾಷೆಯಲ್ಲಿನ ಪ್ರಾವಿಣ್ಯತೆ ಮಕ್ಕಳ ಆಲೋಚನೆ, ಅರ್ಥಗ್ರಹಿಕೆ ಹಾಗೂ ಅಭಿವ್ಯಕ್ತಿ ಶಕ್ತಿಯನ್ನು ವೃದ್ಧಿಸುತ್ತದೆ. ಅನೇಕ ಮುಂದುವರೆದ ರಾಷ್ಟ್ರಗಳು ದ್ವಿಭಾಷಾ ಶಿಕ್ಷಣವನ್ನು ಉತ್ತೇಜಿಸುತ್ತಿವೆ. ಕನ್ನಡವನ್ನು ಎಲ್ಲಾ ಶಾಲೆಗಳಲ್ಲೂ ಕಡ್ಡಾಯ ಭಾಷೆಯಾಗಿ ಕಲಿಸಲು ಕ್ರಮವಹಿಸಬೇಕು. ಭಾಷಾ ನೀತಿಯ ಬಗ್ಗೆ ಸ್ಪಷ್ಟ ನೀತಿ ನಿರ್ಧಾರ ಮತ್ತು ಅನುಷ್ಠಾನ ಚಟುವಟಿಕೆಗಳ ಪಟ್ಟಿ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಅಧ್ಯಕ್ಷ ನರಸಿಂಹ,ಯಲ್ಲಪ್ಪ ನಿಲೋಗಲ್, ದೀಪಕ್



ಯಾದವ್, ರವಿ ಮದ್ಲಾಪೂರ, ಭೀಮಣ್ಣ ಮುದಗಲ್,ವಿನಯಕುಮಾರ್, ಸಂತೋಷ ನಕ್ಕುಂದಿ, ಮಹೇಶ ನಾಯಕ, ಕೆ.ನವೀನ ಕುಮಾರ, ಸಿದ್ದಪ್ಪ ಮದ್ಲಾಪೂರ, ಬಿ.ಅಮರೇಶ ನಸ್ಲಾಪೂರ, ಶ್ರೀನಿವಾಸ ರಬ್ಬಣಕಲ್, ಅಂಜಿ ಮುಷ್ಟೂರು, ಮಲ್ಲಿಕಾರ್ಜುನ ಬೊಮ್ಮನಾಳ, ಸಿದ್ದಪ್ಪ ನಸ್ಲಾಪೂರ, ಹರೀಶ ಕಾತರಕಿ ಸೇರಿದಂತೆ ಇತರರು ಇದ್ದರು.

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸ್ಥಾಪನೆಗೆ ಶಿಕ್ಷಣ ಸಚಿವರಿಗೆ ಶರಣಗೌಡ ಬಯ್ಯಾಪೂರ ಮನವಿ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಜು.10**– ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ತಾಲೂಕಿನಲ್ಲಿ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಸ್ಥಾಪನೆ ಮಾಡಬೇಕೆಂದು ಶಿಕ್ಷಣ ಸಚಿವರಿಗೆ ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಅವರು ಮನವಿ ಸಲ್ಲಿಸಿ ಒತ್ತಾಯಿಸಿದರು.

ರಾಯಚೂರು ಜಿಲ್ಲೆಯ ಮಸ್ಕಿ, ಸಿರವಾರ, ಅರಕೇರಾ ಹಾಗೂ ಕೊಪ್ಪಳ ಜಿಲ್ಲೆಯ ಕುಕನೂರು, ಕಾರಟಗಿ ಮತ್ತು ಕನಕಗಿರಿ ತಾಲೂಕುಗಳು ಹೊಸದಾಗಿ ಆಗಿದ್ದು, ಈ ಪ್ರದೇಶದ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಮ್ಮ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೈನಂದಿನ ವ್ಯವಹಾರಗಳಿಗಾಗಿ ಭೌಗೋಳಿಕವಾಗಿ ಜಿಲ್ಲೆಯ ಕಛೇರಿಗಳು ದೂರವಾಗಿದ್ದವು. ಹೀಗಾಗಿ ಸಾರ್ವಜನಿಕರು ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣವಾಗಿ ಸೂಕ್ತ ಕ್ರಮ ಕೈಗೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

## ನೂರಾರು ಕೆಜಿ ಕಲಬರಕೆ ಆಹಾರ ಪದಾರ್ಥಗಳನ್ನು ವಶ ಪಡಿಸಿಕೊಂಡ ಆಹಾರ ನಿರೀಕ್ಷಕರು

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.10**–ಪಟ್ಟಣದ ವಾರ್ಡ ನಂ 25 ರಲ್ಲಿ ಬರುವ ಇಸ್ಲಾಂ ನಗರದ ಗೌಸೀಯ ಮಸೀದಿ ಹತ್ತಿರದಲ್ಲಿನ ಖಾಲಿ ನಿವೇಶನದಲ್ಲಿ ಅನೇಕ ದಿನಗಳಿಂದ ಆಹಾರ ಪದಾರ್ಥಗಳ ಕಲಬೆರಕೆ ನಡೆಯುತ್ತಿರುವ ಖಚಿತ ಮಾಹಿತಿಯ ಮೇರೆಗೆ ಇಂದು ಮಾನ್ವಿ ತಾಲೂಕು ಆಹಾರ ನಿರೀಕ್ಷಕ ದೇವರಾಜ ಹಾಗೂ ಸಿಂಧನೂರು ಆಹಾರ ಸುರಕ್ಷತಾ ಅಧಿಕಾರಿ ಗುರುರಾಜ ಹಾಗೂ ಪುರಸಭೆ ಆಹಾರ ನಿರೀಕ್ಷಕರಾದ ಮಹೇಶಕುಮಾರ ನೇತೃತ್ವದಲ್ಲಿ ಮಧ್ಯಾಹ್ನ 3ಕ್ಕೆ ಆಕಸ್ಮಿಕವಾಗಿ ಜಂಟಿ ದಾಳಿ ನಡೆಸಿ ಕಲಬರೆಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ಸ್ಥಳದಲ್ಲಿ ಆಹಾರ ಪಧಾರ್ಥಗಳನ್ನು ಕಲಬೆರಕೆ ಮಾಡುವುದಕ್ಕೆ ಬಳಸುತ್ತಿದ್ದ ರಾಸಾಯನಿಕ ಬಣ್ಣ, ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಹಾಗೂ ಕಲಬೆರಕೆ ಮಾಡಲಾದ ಆಹಾರ ಪದಾರ್ಥಗಳನ್ನು ವಶಪಡಿಸಿಕೊಂಡು ಅಗತ್ಯ ಕಾನೂನು ಕ್ರಮಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ.

ಮಾನ್ವಿ ತಾಲೂಕು ಆಹಾರ ನಿರೀಕ್ಷಕ ದೇವರಾಜ ಮಾತನಾಡಿ, ತಹಸೀಲ್ದಾರ್ ರವರ ಮಾರ್ಗದರ್ಶನದಲ್ಲಿ ಆಹಾರ ಕಲಬೆರಕೆ ಮಾಡುತ್ತಿರುವ ಖಚಿತವಾದ ಮಾಹಿತಿಯಂತೆ ಇಂದು ದಾಳಿ ನಡೆಸಿ ಸ್ಥಳದಲ್ಲಿ ಕಲಬರಕ್ಕೆ ಅರಶಿಣ ಕಡಲೆ ಕಾಳು,ಕೆಂಪು ಕಡಲೆ ಕಾಳು, ದನಿಯ ಕಾಳು, ಮೆಣಸು,ನೀಲಗೀರಿ ಎಲೆ , ಕೆಂಪು ಕೊಬ್ಬರಿ ಮಸಾಲೇ ಚಕ್ಕೆ, ಸೇರಿದಂತೆ ಒಟ್ಟು 846 ಕೆಜಿ ಅಂದಾಜು 4ಲಕ್ಷ ಮೌಲ್ಯದ ಕಲಬೆರಕೆ ಆಹಾ



ರ ಪದಾರ್ಥಗಳನ್ನು ವಶ ಪಡಿಸಿಕೊಳ್ಳಲಾಗಿದ್ದು ಆಹಾರ ಧಾನ್ಯಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಸ್ಥಳದಲ್ಲಿ ಆಹಾರ ಪದಾರ್ಥಗಳನ್ನು ಕಲಬೆರಕೆ ಮಾಡುವ ವ್ಯಕ್ತಿಗಳು ದೊರೆಯದೆ ತಪ್ಪಿಸಿಕೊಂಡಿದ್ದು ನಿವೇಶನದ ಮಾಲಿಕರಿಂದ ಮಾಹಿತಿ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಿಂಧನೂರಿನ ಆಹಾರ ಸುರಾಕ್ಷಧಿಕಾರಿ ಗುರುರಾಜ ಮಾತನಾಡಿ ಕಳಪೆ ಮತ್ತು ಹಾಳದ ಆಹಾರ ಪದಾರ್ಥಗಳಿಗೆ ಕೃತಕ ರಾಸಾಯನಿಕ ಬಣ್ಣವನ್ನು ಬಳಸಿ ಗ್ರಾಹಕರನ್ನು ಆಕರ್ಷಿಸಿ ಮಾರಾಟ ಮಾಡಲಾಗುತ್ತಿರುವುದು ಕಂಡು ಬಂದಿದ್ದು ಇಂತಹ ಆಹಾರ



ಪದಾರ್ಥಗಳನ್ನು ಮಸಾಲೆ ಸಾಮಾಗ್ರಿಗಳಲ್ಲಿ ಹೆಚ್ಚಿಗಿ ಬಳಸಲಾಗುತ್ತದೆ, ಇಂತಹ ರಾಸಾಯನಿಕ ಮಿಶ್ರಿತ ಆಹಾರವನ್ನು ಬಳಸುವುದರಿಂದ ಹಾಗೂ ಸೇವನೆ ಮಾಡುವುದರಿಂದ ಆರೋಗ್ಯದ ಮೇಲೆ ಗಂಭಿರವಾದ ಪರಿಣಾಮವಾಗುತ್ತದೆ. ಮಾದರಿಗಳನ್ನು ಸಂಗ್ರಹಿಸಿ ಪ್ರಯೊಗಾಲಕ್ಕೆ ಕಳುಹಿಸಲಾಗಿದ್ದು ವರದಿ ಬಂದ ನಂತರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದಾಳಿಯಲ್ಲಿ, ಪುರಸಭೆ ಆಹಾರ ನಿರೀಕ್ಷಕರಾದ ಮಹೇಶಕುಮಾರ ಹಾಗೂ ಸಿಬ್ಬಂದಿಗಳು ಇದ್ದರು.

## ಮೊದಲನೇಯ ಪುಟದಿಂದ

# ಹೊಸ ಉದ್ಯೋಗ ಆಧರಿತ ಪ್ರೋತ್ಸಾಹಧನ: ನೀರಜ್ ಕುಮಾರ್

ಹಾಗೂ ಉದ್ಯಮಿಗಳಿಗೆ ಹಣಕಾಸಿನ ನೆರವು ದೊರೆಯಲಿದೆ ಎಂದರು.

ಕೇಂದ್ರ ಸರ್ಕಾರವು 99,446 ಕೋಟಿ ರೂ. ವೆಚ್ಚದೊಂದಿಗೆ ಈ ಯೋಜನೆಯನ್ನು ಜಾರಿಗೆ ತರುವ ಮೂಲಕ ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿ ಹೊಸ ಉದ್ಯೋಗ ಸೃಷ್ಟಿಸುವ ಗುರಿಯನ್ನು ಹೊಂದಿದೆ ಎಂದರು. ಈ ಯೋಜನೆಯಡಿಯಲ್ಲಿ ಸುಮಾರು 1.92 ಕೋಟಿ ಹೊಸದಾಗಿ ಉದ್ಯೋಗಕ್ಕೆ ಪ್ರವೇಶಿಸುವವರು, ಅಂದರೆ ಇದೆ ಮೊದಲ ಬಾರಿಗೆ ನೋಂದಾಯಿಸಿ ಕೊಳ್ಳುವವರು ಲಾಭ ಪಡೆಯಲಿದ್ದಾರೆ. ಈ ಯೋಜನೆಯ ಪ್ರಯೋಜನಗಳು 2025ರ ಆಗಸ್ಟ್ 1ರಿಂದ 2027ರ ಜುಲೈ 31ರೊಳಗೆ ಹೊಸ ಉದ್ಯೋಗಗಳು ಸೃಷ್ಟಿಯಾದ ಸಂದರ್ಭ ಅನ್ವಯವಾಗಲಿವೆ ಎಂದು ಹೇಳಿದರು.

ಇದರಲ್ಲಿ ಎರಡು ಪ್ರಮುಖ ಭಾಗಗಳಿವೆ. ಮೊದಲ ಭಾಗದಲ್ಲಿ ಇಪಿಎಫ್‌ಓ ನೋಂದಾಯಿತ ಹೊಸ ಉದ್ಯೋಗಿಗಳಿಗೆ ಒಂದು ತಿಂಗಳ ವೇತನದಷ್ಟು 15,000 ಗರಿ ಮೊತ್ತವನ್ನು ಎರಡು ಹಂತಗಳಲ್ಲಿ ಪಾವತಿಸಲಾಗುವುದು. ಮೊದಲ ಕಂತು 6 ತಿಂಗಳ ಸೇವೆಯ ನಂತರ ಹಾಗೂ ಎರಡನೇ ಕಂತು 12 ತಿಂಗಳ ಸೇವೆಯ ನಂತರ ಹಣಕಾಸು ಸಾಂಸ್ಕೃತಿಕ ಶಿಬಿರದಲ್ಲಿ ಭಾಗವಹಿಸಿದ ಬಳಿಕ ಪಾವತಿಸಲಾಗುತ್ತದೆ. ಈ ಹಣದ ಒಂದು ಭಾಗವನ್ನು ನಿಗದಿತ ಅವಧಿಗೆ ಉಳಿತಾಯ ಖಾತೆಯಲ್ಲಿ ಇರಿಸುವ ವ್ಯವಸ್ಥೆಯು ಕೂಡ ಕೈಗೊಳ್ಳಲಾಗಿದೆ. ಇದರಿಂದ ಉಳಿತಾಯದ ಚಟದ ಉತ್ತೇಜನ ದೊರೆಯಲಿದೆ ಎಂದರು.

ಯೋಜನೆಯ ಎರಡನೇ ಭಾಗದಲ್ಲಿ ಉದ್ಯಮಿಗಳು ಉದ್ಯೋಗದಾರರನ್ನು ಪ್ರೋತ್ಸಾಹ ನೀಡಲಾಗುವುದು. ಉದ್ಯಮಿಗಳು ಹೊಸ ಉದ್ಯೋಗಿಗಳನ್ನು ನೇಮಕ ಮಾಡಿದರೆ 1 ಲಕ್ಷದವರೆಗೆ ವೇತನ ಹೊಂದಿರುವ ಉದ್ಯೋಗಿಗಳ ಮೇಲೆ ಮಾಸಿಕ ಪ್ರೋತ್ಸಾಹಧನ ನೀಡಲಾಗುವುದು.

ಉದ್ಯೋಗಿಗಳ ವೇತನ 10,000 ರೂ.ವರೆಗೆ ಇದ್ದರೆ ತಿಂಗಳಿಗೆ 1,000ರೂ. 10,000–20,000 ರೂಪಾಯಿಗಳ ನಡುವೆ ಇದ್ದರೆ 2,000 ರೂ. ಹಾಗೂ 20,000–1 ಲಕ್ಷದವರೆಗೆ ಇದ್ದರೆ ತಿಂಗಳಿಗೆ 3,000 ರೂ ನೀಡಲಾಗುತ್ತದೆ. ಉದ್ಯಮಿಗಳು ಕನಿಷ್ಠ 6 ತಿಂಗಳು ನಿರಂತರವಾಗಿ ಈ ಉದ್ಯೋಗಿಗಳನ್ನು ಉದ್ಯೋಗದಲ್ಲಿಡಬೇಕು.

ಈ ತಯಾರಿಕಾ ವಲಯದಲ್ಲಿ ಈ ಪ್ರಯೋಜನವನ್ನು ಮೂರನೇ ಮತ್ತು ನಾಲ್ಕನೇ ವರ್ಷಗಳಿಗೂ ವಿಸ್ತರಿಸಲಾಗಿದೆ, ಮತ್ತು 50 ಕ್ಕಿಂತ ಕಡಿಮೆ ಉದ್ಯೋಗಿಗಳಿರುವ ಸಂಸ್ಥೆಗಳು ಕನಿಷ್ಠ 2 ಹಾಗೂ 50 ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಸಂಸ್ಥೆಗಳು ಕನಿಷ್ಠ 5 ಹೊಸ ಉದ್ಯೋಗಿಗಳನ್ನು ನೇಮಿಸಬೇಕೆಂಬ ಷರತ್ತು ವಿಧಿಸಲಾಗಿದೆ ಎಂದರು.

ಅಂತಿಮವಾಗಿ, ಯೋಜನೆಯಡಿ ಹೊಸ ಉದ್ಯೋಗಿಗಳಿಗೆ ನೇರವಾಗಿ ಆಧಾರ್ ಬ್ರಿಡ್ಜ್ ಪೇಮೆಂಟ್‌ಟ್ ವ್ಯವಸ್ಥೆ ಮೂಲಕ ಡಿಬಿಟಿ (ನೇರ ಲಾಭ ಪಾವತಿ) ಮೂಲಕ ಹಣ ಪಾವತಿಸಲಾಗುವುದು. ಉದ್ಯಮಿಗಳಿಗೆ ಪಾನ್ ಅಂಕಿತ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾಯಿಸುವುದರ ಮೂಲಕ ಯೋಜನೆಯ ಜಾರಿ ಸುಗಮವಾಗಲಿದೆ ಎಂದು ಹೇಳಿದರು.

ಈ ಯೋಜನೆಯು "ಪ್ರಧಾನಮಂತ್ರಿ ಘೋಷಿಸಿದ ಅಮೃತ ಕಾಲದ ಈ ಯೋಜನೆ ಮೂಲಕ ಯುವಕರಿಗೆ ಉದ್ಯೋಗ, ಕೌಶಲ್ಯಾಭಿವೃದ್ಧಿ ಹಾಗೂ ಉಳಿತಾಯದ ಮನೋಭಾವನೆ ಬೆಳೆಯಲಿದ್ದು, ಉದ್ಯಮ ವಲಯವೂ ಹೊಸ ರೀತಿಯಲ್ಲಿ ಬಲಪಡಲಿದೆ" ಎಂದು ಹೇಳಿದರು. ಸಭೆಯಲ್ಲಿ ಲೆಕ್ಕಾಧಿಕಾರಿಗಳಾದ ಪಿ. ರಾಘವೇಂದ್ರ ರಾವ್ ಮತ್ತು ಮುಕೇಶ್ ತುಳಸಿರಾಮ್ ಅವರು ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರವಾಗಿ ಮಾತನಾಡಿದರು.

ಈ ಸಭೆಯಲ್ಲಿ ಲೆಕ್ಕಾಧಿಕಾರಿಗಳಾದ ಪಿ. ರಾಘವೇಂದ್ರ ರಾವ್ ಮತ್ತು ಮುಕೇಶ್ ತುಳಸಿರಾಮ್‌ಇನ್ನಿತರರು ಭಾಗಿಯಾಗಿದ್ದರು.

# ರೈತರ ಮನವೊಲಿಕೆ ಯಶಸ್ವಿ : ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭ

ಪರಿಹಾರ ಮರಿಚೀಕಿಯಾಗಿತ್ತು. ರಸ್ತೆಗಾಗಿ ನಾನ ಸಂಘ ಸಂಸ್ಥೆಗಳು ಪ್ರತಿಭಟನೆ ಧರಣಿ ನಡೆಸಿದ್ದನ್ನು ಮಾಧ್ಯಮಗಳೂ ಬೆಳಕು ಚೆಲ್ಲಿದ್ದವು. ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ಪಾಧಿಕಾರ ಅಧಿಕಾರಿಗಳಾದ ವಿಜಯಕುಮಾರ, ಕೃಷ್ಣಮೂರ್ತಿ ತಹಸೀಲ್ದಾರ್ ಸತ್ಯಮ್ಮ, ಪಿಐ ಪುಂಡಲೀಕ ಪಟಾತಾರ, ರೈತರಾದ ಕುಪ್ಪಣ್ಣ ಕೊಡ್ಲಿ, ಬಸಪ್ಪ, ಶರಣಪ್ಪ, ಅಮರಪ್ಪ, ಯಲ್ಲಪ್ಪ ಸೇರಿದಂತೆ ಇದ್ದರು.

# ವಚನಗಳಲ್ಲಿ ಸತ್ಯವಿರುವುದರಿಂದ ವಿಶ್ವಮಾನ್ಯವಾಗಿವೇ: ಶ್ರೀಗುರುಮಹಾಂತ ಸ್ವಾಮಿಗಳು

ಪೂಜಿಸಿದಲ್ಲಿ ಸಕಾಲವು ದೊರೆಯುತ್ತದೆ. ಅಡಂಬಾರದ ಆಚರಣೆಗಳನ್ನು ಬೀಡಿ ಬಸವಣ್ಣನವರು ತಿಳಿಸಿದ ಸರಳವಾದ ಮಾರ್ಗದಲ್ಲಿ ನಡೆದಾಗ ಮಾತ್ರ ಬಾಳು ಬೆಳಗುವುದಕ್ಕೆ ಸಾಧ್ಯವಾಗುತ್ತದೆ ಬಸವತತ್ವ ಅನುಯಾಯಿಗಳು ಇಂದು ಶಾಶ್ವತವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

ನಾಡಿನಲ್ಲಿ ಬಸವತತ್ವಗಳ ಸಾಧನೆ ಮಾಡಿ ಆಚರಣೆ ಮಾಡುತ್ತಿರುವ ಬಸವತತ್ವ ಅನುಯಾಯಿಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಯನ್ನು ವಿತರಿಸಲಾಯಿತು. ಮಹಾಪ್ರಸಾದಿ ಶಿವಶರಣ ಬಿಚ್ಚಿಬಾಚಾರಸ ಗಬ್ಬೂರು ಪ್ರಶಸ್ತಿಯನ್ನು ಶಿವಮೊಗ್ಗ ನವಲಿಂಗಶರಣರು ಸಂತೆಕಲ್ಲೂರು ರವರಿಗೆ, ಶಿವಶರಣ ಸುಂಕದ ಬಂಕಣ್ಣ ಮಲ್ಲಟ ಪ್ರಶಸ್ತಿಯನ್ನು ಡಾ.ಬಸವ ಪ್ರಭು ಪಾಟೀಲ್ ಬೆಟ್ಟದೂರು ರವರಿಗೆ , ವಚನ ಪಿತಾಮಹ ಫ.ಗು.ಹಳಕಟ್ಟಿ ಪ್ರಶಸ್ತಿಯನ್ನು ಸೂರಿಬಾಬು ನೆಕ್ಕಂಟಿ, ನಗೆಮಾರಿ ತಂದೆ ವೀರಣ್ಣ ಗೌಡ ಪ್ರಶಸ್ತಿಯನ್ನು ವಿಶ್ವಾರಾಧ್ಯ ಸತ್ಯಂಪೇಟೆ, ಶಿವಶರಣೆ ಮುಕ್ತಾಯಕ್ಕ ಮಸರಕಲ್ ಪ್ರಶಸ್ತಿಯನ್ನು ಕಲ್ಯಾಣೇಶ್ವರಿ ನೀರಮಾನ್ವಿ ರವರಿಗೆ ಬಸವ ನಿಷ್ಠುರವಾದಿ ಪ್ರಶಸ್ತಿಯನ್ನು ತಿಮ್ಮನಗೌಡ ಚಿಲ್ಕರಾಗಿ ರವರಿಗೆ ನೀಡಿ ಗೌರವಿಸಲಾಯಿತು.

ಬಸವ ಸೈನ್ಯ ಸಮಿತಿಯ ಮಕ್ಕಳಿಂದ ವಚನ ನೃತ್ಯ ಪ್ರದರ್ಶನ ನಡೆಯಿತು.

ಕಾರ್ಯಕ್ರಮದಲ್ಲಿ ಶಿರೂರು ಶ್ರೀ ವಿಜಯ ಮಹಾಂತ ತೀರ್ಥ ಡಾ.ಬಸವಲಿಂಗ ಮಹಾಸ್ವಾಮಿಗಳು, ಶಾಸಕ ಹಂಪಯ್ಯನಾಯಕ, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಲಕಲ್ ಶಾಖಾ ಮಠ ಲಿಂಗಸೂಗೂರು ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು,ಮನಗೊಳ್ಳಿ ವಿರಕ್ತಮಠದ ಶ್ರೀ ವಿರತಿಶಾನಂದ ಮಹಾಸ್ವಾಮಿಗಳು,ಸಿರುಗುಪ್ಪ ಶ್ರೀ ವೆಂಕಟಾಪುರ ಬಸವರಾಜಪ್ಪ ಶರಣರು,ಗುರುಬಸವ ಮಹಾಮನೆಯ ಶ್ರೀ ಬಸವಭೂಷಣಸ್ವಾಮಿಗಳು,ಬಸವದೇವರು, ಕುರುಕುಂದಿ ಗಂಗಮ್ಮ ವೀರಭದ್ರಪ್ಪ, ಮಾನ್ವಿ ತಾಲೂಕು ಬಸವಕೇಂದ್ರದ ತಾ.ಅಧ್ಯಕ್ಷರಾದ ಜಿ.ಎಂ. ರಂಗಪ್ಪ, ಶರಣಬಸವ ನೀರಮಾನ್ವಿ ಸೇರಿದಂತೆ ಇನ್ನಿತರರು ಇದ್ದರು.

ಸೇರಿದಂತೆ ವಿವಿಧ ಮಠಗಳ ಶ್ರೀಗಳು ಹಾಗೂ ಬಸವ ತತ್ವ ಅನುಯಾಯಿಗಳು ಭಾಗವಹಿಸಿದರು.

# ಕೆಪಿಎಂಇ ಕಾಯ್ದೆ ಸಮಗ್ರವಾಗಿ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ನಿತೀಶ್ ಕೆ. ಸೂಚನೆ

ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಖಾಸಗಿ ಆಸ್ಪತ್ರೆಗಳ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಬೇಕು. ಜಿಲ್ಲೆಯ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸ ದರ ಪಟ್ಟಿಯನ್ನು ಕಡ್ಡಾಯವಾಗಿ ಹಾಕುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಒಂದು ವೇಳೆ ದರಪಟ್ಟಿ ಹಾಕದೆ ಇರುವ ಆಸ್ಪತ್ರೆಗಳ ಮೇಲೆ ದಾಳಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಕೆಪಿಎಂಇ ಕಾಯ್ದೆ ಕುರಿತು ಜಿಲ್ಲೆಯ ಸಂಬಂಧಿಸಿದ ಅಧಿಕಾರಿಗಳಿಗೆ ಶೀಘ್ರದಲ್ಲೇ ತರಬೇತಿಯನ್ನು ಆಯೋಜಿಸಬೇಕು. ಜಿಲ್ಲೆಯಲ್ಲಿ ತಾಲೂಕು ಆರೋಗ್ಯ ಅಧಿಕಾರಿಗಳು ಕಾಯ್ದೆಯನ್ನು ಸರಿಯಾಗಿ ಅನುಷ್ಠಾನ ಮಾಡಬೇಕು ಅಧಿಕಾರಿಗಳು ನಿರ್ಲಕ್ಷ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಕೆಪಿಎಂಇ ಕಾಯ್ದೆಯಡಿ ನೋಂದಣಿಯಾದ ಪ್ರಮಾಣ ಪತ್ರ ಹಾಗೂ ಮರುನೋಂದಣೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕು. ಅಲ್ಲದೆ ಖಾಸಗಿ ಆಸ್ಪತ್ರೆಗಳಲ್ಲಿ ನುರಿತ ವೈದ್ಯರಿಂದ ಮಾತ್ರ ರೋಗಿಗಳ ವಿಚಾರಣೆ ಮಾಡಬೇಕು.

ಜಿಲ್ಲೆಯಲ್ಲಿ ಮರುನೋಂದಣೆಗೆ ರಾಯಚೂರಿನಲ್ಲಿ 04, ಮಾನ್ವಿಯಲ್ಲಿ 9 ಸೇರಿದಂತೆ ಒಟ್ಟು 13 ಖಾಸಗಿ ಆಸ್ಪತ್ರೆಗಳು ಕಾಯ್ದೆಯಡಿ ಮರುನೋಂದಣಿಗೆ ಮಾಡಿರುವುದಿಲ್ಲ. ಕಾಯ್ದೆಯ ರಾಯಚೂರಿನಲ್ಲಿ 10, ಮಾನ್ವಿಯಲ್ಲಿ 2 ಹಾಗೂ ಲಿಂಗಸುಗೂರಿನಲ್ಲಿ 01 ಸೇರಿದಂತೆ ಒಟ್ಟು 13 ಹೊಸ ಅರ್ಜಿಗಳ ಬಂದಿವೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಐ.ಎಮ್.ಎ ಸಂಸ್ಥೆಯ ಅಧ್ಯಕ್ಷರಾದ ಡಾ.ಶ್ರೀಶೈಲ ಅಮರಖೇಡ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರವೀಂದ್ರ ಘಟಗಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಿವುಕುಮಾರ್, ರಾಯಚೂರು ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಜ್ವಲ್ ಸೇರಿದಂತೆ ಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

# ಸಿಎಂ ಹುದ್ದೆ ಖಾಲಿ ಇಲ್ಲ

**ನವದೆಹಲಿ, ಜು. 10–**ರಾಜ್ಯದಲ್ಲಿ ಸಿಎಂ ಹುದ್ದೆ ಖಾಲಿಯಿಲ್ಲ. ಹೀಗಾಗಿ ಹೈಕಮಾಂಡ್ ಬಳಿ ಅಧಿಕಾರ ಹಂಚಿಕೆ ವಿಷಯವೇ ಪ್ರಸ್ತಾಪವಾಗಿಲ್ಲ. ಇಂದು ಹೇಳಿರುವ ಸಿದ್ದರಾಮಯ್ಯ, 5 ವರ್ಷಗಳ ಕಾಲ ತಾವೇ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯುವುದಾಗಿ ಪುನರುಚ್ಛರಿಸಿದ್ದಾರೆ.

ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ ವಿಚಾರ ಕುರಿತಂತೆ ನಾನಾ ವ್ಯಾಖ್ಯಾನಗಳು ಹಾಗೂ ಕೆಲ ಶಾಸಕರಿಂದ ಬಹಿರಂಗ ಹೇಳಿಕೆಗಳು ಹೇಳುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ದೆಹಲಿ ಪ್ರವಾಸದಲ್ಲಿರುವ ಸಿದ್ದರಾಮಯ್ಯ ಸುದ್ಧಿಗೋಷ್ಟಿಯಲ್ಲಿ ಮಾತನಾಡಿ ಸಿಎಂ ಸ್ಥಾನ ಖಾಲಿಯಿಲ್ಲ. ಆದರೆ ನಾಯಕತ್ವ ಬದಲಾವಣೆ ವಿಚಾರ ಎಲ್ಲಿಂದ ಬರುತ್ತದೆ. ತಾವಾಗಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗಲಿ, ನಾಯಕತ್ವ ವಿಚಾರ ಕುರಿತಂತೆ ಹೈಕಮಾಂಡ್ ತೆಗೆದುಕೊಳ್ಳುವ ವಿಚಾರ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ಸ್ಪಷ್ಟ ಪಡಿಸಿದರು.

ಕೆಲವು ಶಾಸಕರು ನನ್ನ ಪರವಾಗಿ ಇನ್ನು ಕೆಲವು ಶಾಸಕರು ಡಿ.ಕೆ.ಶಿವಕುಮಾರ್ ಹೇಳಿಕೆ ಬಗ್ಗೆ ನೀಡುತ್ತಾರೆ. ಆದರೆ ಇದು ಅವರು ವೈಯಕ್ತಿಕ ಅಭಿಪ್ರಾಯವಾಗಿದೆ. ಮುಖ್ಯಮಂತ್ರಿ ಬದಲಾವಣೆ ಅಥವಾ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ಹೈಕಮಾಂಡ್ ನಿರ್ಧರಿಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಬಿಜೆಪಿಯವರು ಹೇಳುತ್ತಿರುವ ಹೇಳಿಕೆಗೆ ಸಿಡಿಮಿಡಿಗೊಂಡ ಸಿದ್ದರಾಮಯ್ಯ, ಬಿಜೆಪಿಯವರು ನಮ್ಮ ಹೈಕಮಾಂಡ್ ಯಾರೋ ಹೇಳುವುದನ್ನು ಕೇಳಿ ಗಾಳಿ ಸುದ್ಧಿ ಹಬ್ಬಿಸುತ್ತೀರಾ, ತಾವಾಗಲಿ, ಡಿಕೆ ಶಿವಕುಮಾರ್ ಆಗಲಿ ನಾಯಕತ್ವ ಬದಲಾವಣೆ ಕುರಿತು ಯಾವುದೇ ಹೇಳಿಕೆ ನೀಡಿಲ್ಲ. ಈ ಬಗ್ಗೆ ತಾವೇ ಕೆಲವು ದಿನಗಳ ಹಿಂದೆ 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ ಎಂದು ಹೇಳಿದ್ದೇನೆ. ಇಷ್ಟಾದರೂ ಗಾಳಿ ಸುದ್ಧಿ ಹಬ್ಬಿಸಿರುತ್ತಿರುವ ಬಗ್ಗೆ ಮಾಧ್ಯಮಗಳನ್ನು ತರಾಟೆಗೆ ತೆಗೆದುಕೊಂಡರು.

ನಾಯಕತ್ವ ಬದಲಾವಣೆ ಕುರಿತಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ರಾಜ್ಯಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲೂ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಗೊಂದಲ ಸೃಷ್ಟಿಸುತ್ತಿದ್ದೀರಿ ಎಂದು ಮೂದಲಿಸಿದರು.

ರಾಹುಲ್ ಗಾಂಧಿಯವರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ನಾನು ಭೇಟಿಗೆ ಅವಕಾಶ



ಕೇಳಿದ್ದೇನೆ.ಆದರೆ ಅವರನ್ನು ಭೇಟಿ ಮಾಡುವ ಸಾಧ್ಯತೆಯಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೆಂಗಳೂರಿನಲ್ಲಿದ್ದಾರೆ. ಆದ್ದರಿಂದ ಅವರನ್ನು ಭೇಟಿ ಮಾಡಲು ಆಗುತ್ತಿಲ್ಲ. ದೆಹಲಿಗೆ ಬಂದ ಸಂದರ್ಭದಲ್ಲಿ ನಮ್ಮ ನಾಯಕರನ್ನು ಭೇಟಿ ಮಾಡಲು ತಪ್ಪೇ ಎಂದು ಪ್ರಶ್ನಿಸಿದರು.

ಸುರ್ಜೇವಾಲಾ ಜೊತೆ ಸಿಎಂ, ಡಿಸಿಎಂ ಚರ್ಚೆ

ರಾಜ್ಯ ರಾಜಕಾರಣದಲ್ಲಿ ನಾಯಕತ್ವ ವಿಚಾರ ಬದಲಾವಣೆ ಕುರಿತಂತೆ ಸಾಕಷ್ಟು ಚರ್ಚೆಗಳು ನಡೆದಿರುವ ಬೆನ್ನಲ್ಲೇ ದೆಹಲಿ ಭೇಟಿ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ಸಂಜೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಣದೀಪ್ ಸಿಂಗ್ ಸುರ್ಜೇವಾಲ ಅವರು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಲಿರುವುದು ಕುತೂಹಲ ಕೆರಳಿಸಿದೆ.

ಈಗಾಗಲೇ ಸುರ್ಜೇವಾಲಾ ಅವರು ಎರಡು ಬಾರಿ ಬೆಂಗಳೂರಿಗೆ ಭೇಟಿ ನೀಡಿ ಕಾಂಗ್ರೆಸ್ ಶಾಸಕರ ಜೊತೆ ಮಾತುಕತೆ ನಡೆಸಿ, ಸರ್ಕಾರ ಮತ್ತು ಸಚಿವರ ಕಾರ್ಯ ವೈಖರಿಯಗಳ ಬಗ್ಗೆ ಅಹವಾಲು ಆಲಿಸಿದ್ದಾರೆ. ಬಹುತೇಕ ಶಾಸಕರು ಸಚಿವರ ಕಾರ್ಯವೈಖರಿಗಳ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ.

ಈ ಶಾಸಕರ ಅಭಿಪ್ರಾಯ ಸಂಗ್ರಹಿಸಿರುವ ಸುರ್ಜೇವಾಲಾ ದೆಹಲಿಗೆ ವಾಪಾಸ್ ಆಗಿದ್ದು, ಸುರ್ಜೇವಾಲ ಮೈಸೂರು ವಿಭಾಗ 42 ಮಂದಿ ಶಾಸಕರು ಹಾಗೂ ಎರಡನೇ ಹಂತದಲ್ಲಿ ಉತ್ತರ ಕರ್ನಾಟಕ ಭಾಗ ಸೇರಿದಂತೆ 61 ಶಾಸಕರ ಜೊತೆ ಚರ್ಚೆ ನಡೆಸಿ ಅಭಿಪ್ರಾಯ ಸಂಗ್ರಹಿಸಿ ದೆಹಲಿಗೆ ಹೊರಡಿದ್ದಾರೆ.

# ಷೇರು ಮಾರುಕಟ್ಟೆ ಹೂಡಿಕೆ ಹೆಸರಿನಲ್ಲಿ ಕೋಟ್ಯಾಂತರ ರೂ.ಗಳ ವಂಚನೆ: ತಲೆ ಮರೆಸಿಕೊಂಡ ಆರೋಪಿ ಬಂಧನ

**ಕಲಬುರಗಿ,ಜು.10–** ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದಲ್ಲಿ ಅಧಿಕ ಲಾಭಂಶದ ಆಸೆ ತೊರಿಸಿ 800 ಕ್ಕೂ ಜನರಿಂದ ಕೋಟ್ಯಾಂತ ಹಣವನ್ನು ಪಡೆದು ತಲೆ ಮರೆಸಿಕೊಂಡಿದ್ದ ಕಲಬುರಗಿಯ ಆರ್ಕೆಡ ಬಿಲ್ಡಿಂಗ ಎಮ್.ಡಿ ರಾಮಚಂದ್ರಜಾರಿ ಅಕುಲ್ ಆಲಿಯಾಸ ರಾಮು ಅಕುಲ್ ಜಾರಿ ಎಂಬ ಆರೋಪಿಯನ್ನು ಹೈದ್ರಾಬಾದಿನಲ್ಲಿ ಬಂಧಿಸುವಲ್ಲಿ ಕಲಬುರಗಿ ಪೊಲೀಸ ತಂಡ ಯಶಸ್ವಿಯಾಗಿದೆ.

ಆರೋಪಿ ರಾಮು ಅಕುಲ್ ಜಾರಿ "ಏನಸ್ ಎಂಟರ್ ಪ್ರೈಜಸ್ ಹೆಸರಿನಲ್ಲಿ ಆಪೀಸ ತೆರೆದು ಷೇರು ಮಾರುಟ್ಟೆಯಲ್ಲಿ 6, 8 ಮತ್ತು 12 ತಿಂಗಳ ಹೂಡಿಕೆಯ ಯೋಜನೆಯಲ್ಲಿ ಕಲಬುರಗಿ, ಬೀದರ ಮತ್ತು ವಿಜಯಪುರ ಜಿಲ್ಲೆಯ 800 ಕ್ಕೂ ಹೆಚ್ಚು ಜನರಿಂದ ಕೋಟ್ಯಾಂತ ಹಣವನ್ನು ಪಡೆದುಕೊಂಡು ವಂಚಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಪತ್ತೆಗಾಗಿ ರಚಿಸಲಾದ ಪೊಲೀಸ ತಂಡ ಯಶಸ್ವಿ ಕಾರ್ಯಚರಣೆ ಕೈಗೊಂಡು ಹೈದ್ರಾಬಾದಿನಲ್ಲಿ ಬಂಧಿಸಿದೆ ಎಂದು ಕಲಬುರಗಿ ಪೊಲೀಸ ಆಯುಕ್ತರಾದ ಡಾ.ಶರಣಪ್ಪ ಢಾಗೆ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಒಂದು ಲಕ್ಷ ರೂ.ಗಳ ಹೂಡಿಕೆಗೆ ಪ್ರತಿ ತಿಂಗಳು 20 ಸಾವಿರ ರೂ.ಗಳ ಲಾಭಂಷವನ್ನು ಪ್ರಾರಂಭದಲ್ಲಿ ಹೂಡಿಕೆದಾರರಿಗೆ ಕೊಡುತ್ತಿದ್ದ ಆರೋಪಿ ಹೆಚ್ಚಿನ ಲಾಭಂಶದ ಆಸೆ ತೋರಿಸಿ ಕೋಟ್ಯಾಂತರ ರೂ.ಗಳನ್ನು ವ್ಯವಸ್ಥಿತವಾಗಿ ವಂಚನೆ ಮಾಡಿರುವ ಆರೋಪಿ ಬಿ.ಎ ಪದವಿದರನಾಗಿದ್ದು, 1984 ಫೆಬ್ರವರಿಯಿಂದ 1996 ರವರೆಗೆ ಏರಭೋರ್ಸನಲ್ಲಿ ತಾಂತ್ರಿಕ ಹುದ್ದೆ (ರೇಡಿಯೋ ಟೆಕ್ನಿಷಿಯನ್ ಆಗಿ ಕರ್ತವ್ಯ ನಿರ್ವಹಿಸಿ ನಂತರ ಸ್ವಯಂ ನಿವೃತ್ತಿ ಪಡೆದು ನಂತರ ಹೈದರಾಬಾದನಲ್ಲಿ ಸಣ್ಣಪುಟ್ಟ ಮಟ್ಟದಲ್ಲಿ ರೀಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಳ್ಳುತ್ತಾನೆ.

ನಂತರ ಬಾಂಬೆಯಲ್ಲಿ ಹಳೆಯ ಕಾರುಗಳ ಮರು ಮಾರಾಟದಲ್ಲಿ ತೊಡಗಿಸಿಕೊಂಡಿದ್ದು, ಕಲಬುರಗಿ ನಗರದಲ್ಲಿರುವ ಹೈಕೋರ್ಟ ಹತ್ತಿರ ಅಕ್ಕಮಹಾದೇವಿ ಕಾಲೋನಿಯ ಆರ್ಕೆಡ ಬಿಲ್ಡಿಂಗ ಮತ್ತು "ಏನಸ್ ಎಂಟರ್ ಪ್ರೈಜಸ್ ಹೆಸರಿನಲ್ಲಿ ಆಪೀಸ ತೆರೆದಿರುತ್ತಾನೆ. ವಂಚನೆಗೆ ಒಳಗದ ಉಲ್ಲಾಸ ತಂದೆ ಅಶೋಕ ನೇಲ್ಲ ವಯ: 34 ವರ್ಷ ಉ: ಹೋಟೇಲ್ ವ್ಯಾಪಾರ ಸಾ. ತಿಳಗೂಳ, ತಾ॥ ದೇವರ ಹಿಪ್ಪರಗಿ ಜಿ॥ ಬಿಜಾಪೂರ ಹಾಲಿ ವಸ್ತಿ ಶ್ರೀ ಚಂದ್ರಸಿದ್ದ ನಿಲಯ, ಎಲ್.ಐ.ಜಿ 74/ಇ. ಡಬ್ಲ್ಯೂ, ಕೆ.ಹೆಚ್.ಬಿ ಅಕ್ಕಮಹಾದೇವಿ ಕಾಲೋನಿ ಹೈಕೋರ್ಟ ಹತ್ತಿರ ಕಲಬುರಗಿ ಇದ್ದು, ಕಳೆದ ದಿನಾಂಕ: 23-05-2025 ರಂದು ನಗರದ ಸಿ.ಇ.ಎನ್ ಪೊಲೀಸ್ ಠಾಣೆಗೆ ಹಾಜರಾಗಿ ಸಲ್ಲಿಸಿದ ದೂರಿನನ್ವಯ ಕಾರ್ಯಚರಣೆ ಕೈಗೊಳ್ಳಲು ಪೊಲೀಸ ತಂಡವನ್ನು ರಚಿಸಲಾಗಿತ್ತು,

ಏನಸ್ ಎಂಟರ್ ಪ್ರೈಜಸ್ ಹೆಸರಿನಲ್ಲಿ ಆಪೀಸ ತೆರೆದು : 9880724780, 8431936405, 7411642777, 7676259059, 63040810173 ಈ ಸಂಖ್ಯೆಯಿಂದ ಸಾರ್ವಜನಿಕರಿಗೆ ಮೋಸ, ವಂಚನೆ ಮಾಡುವ ಉದ್ದೇಶದಿಂದ ಷೇರು ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡಿ ಅಧಿಕ ಲಾಭಾಂಶದ ಹಣ ನೀಡುವುದಾಗಿ ಆಸೆ ತೋರಿಸಿ ತಮ್ಮಿಂದ ಹಾಗೂ ಪಿರ್ಯಾದಿದಾರರ ಸಂಬಂಧಿಕರು ಹಾಗೂ ಪಿರ್ಯಾದಿದಾರರ ಗೆಳೆಯರಿಗೆ ಆರೋಪಿ ಸುಳ್ಳು ಹೇಳಿ ನಂಬಿಸಿ ಹಂತ ಹಂತವಾಗಿ ಬ್ಯಾಂಕ ಖಾತೆಗೆ ಮತ್ತು ನಗದು ರೂಪದಲ್ಲಿ ಒಟ್ಟು 11 ಕೋಟಿ 17 ಲಕ್ಷ ರೂಪಾಯ ಪಡೆದುಕೊಂಡ ಅದರಲ್ಲಿ ಲಾಭದ ಹಣವೆಂದು ಸುಮಾರು 10 ಲಕ್ಷ ರೂಪಾಯಿಗಳನ್ನು ಮರಳಿ ನೀಡಿರುತ್ತಾನೆ.

ಇನ್ನೂಳಿದ ರೂ. ಒಟ್ಟು 97,00,000/– ಹಣವನ್ನು ನೀಡದೆ ವಂಚನೆ ಮಾಡಿರುತ್ತಾನೆ ಎಂದು ದೂರು ನೀಡಲಾಗಿತ್ತು,ಇದಲ್ಲದೆ ಕಲಬುರಗಿ ನಗರದ 200 ಕ್ಕಿಂತ ಹೆಚ್ಚು ಜನರಿಂದ ಹಣ ಹೂಡಿಕೆ ಮಾಡಿಕೊಂಡು ಸ್ವಲ್ಪ ಹಣ ಮರಳಿ ಕೊಟ್ಟು ಉಳಿದ ಹಣ ಕೊಡದೆ ಸುಮಾರು ಅಂದಾಜು 10–12 ಕೋಟಿ ರೂಪಾಯಿ ಮೋಸ, ವಂಚನೆ ಮಾಡಿದ್ದು ಇರುತ್ತದೆ ಆತನ ವಿರುದ್ದು ಸಿ ಇ ಎನ್ ಪೊಲೀಸ್ ಠಾಣೆ ಗುನ್ನೆ ನಂ, 58/2025 ಕಲಂ 316(2), 318(2), 318(4) ಬಿ.ಎನ್.ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು ಇರುತ್ತದೆ.

ಸುದ್ದಿಗೋಷ್ಟಿಯಲ್ಲಿ ಡಿಸಿಪಿ ಕನಿಕ ಸಿಕ್ರಿವಾಲ್, ಎಸಿಪಿ ಮಾಡಿವಾಳಪ್ಪ ಹಾಗೂ ಪೊಲೀಸ ತಂಡದ ಸಿಬ್ಬಂದಿಗಳು ಇದ್ದರು.ಕಲಬುರಗಿ ನಗರ ಪೊಲೀಸ್ ಆಯುಕ್ತಾಯಲದ ವತಿಯಿಂದ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೆನೆಂದರೆ, ಯಾವುದೇ ವ್ಯಕ್ತಿಗಳು ಅತ್ಯಂತ ಕಡಿಮೆ ಅವಧಿಯಲ್ಲಿ ಹಣ ಹೂಡಿಕೆ ಮಾಡಿಕೊಂಡು ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚಿನ ಲಾಭವನ್ನು (15% ರಿಂದ 20%) ನೀಡಲು ಸಾಧ್ಯವಿಲ್ಲ, ಸಾರ್ವಜನಿಕರು ದುರಾಸೆ ಹಾಗೂ ಆಮೀಷಗಳಿಗೆ ಒಳಗಾಗದೇ, ಜಾಗೃತರಾಗಿರಬೇಕು. ಈ ರೀತಿಯ ಹೂಡಿಕೆ ಹಣದಿಂದ ಬರುವ ಲಾಭಾಂಶದಿಂದ ಹಣ ದುಪ್ಪಟ್ಟು ಮಾಡುವ ಹಾಗೂ ವಿವಿಧ ಸ್ಕೀಮ್ ಗಳ ಹೆಸರಿನಲ್ಲಿ ಹೆಚ್ಚಿನ ಹಣ ಗಳಿಸುವ ಹಾಗೂ ಈ ರೀತಿಯ ಅಪರಾಧಗಳಲ್ಲಿ ಭಾಗಿಯಾಗುವಂತೆ ಪ್ರೇರೆಪಿಸುವ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳಿಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಯುವ ಮಾರ್ಗ



# ತುರ್ತು ಪರಿಸ್ಥಿತಿ ವಿರುದ್ಧ ಸಿಡಿದೆದ್ದ ತರೂರ್



**ನವದೆಹಲಿ,ಜು.10–** ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಬಂಧಿತರ ಚಿತ್ರಹಿಂಸೆ, ಮತ್ತು ನ್ಯಾಯಾಂಗೇತರ ಹತ್ಯೆಗಳು ಭಯಾನಕ ವಾಸ್ತವಗಳ ಬಗ್ಗೆ ಅರಿವಿಲ್ಲದೆ ಉಳಿದಿವೆ ಎನ್ನುವ ಮೂಲಕ ತುರ್ತು ಪರಿಸ್ಥಿತಿ ಹೇರಿಕೆ ಮಾಡಿದ ಕ್ರಮವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ತೀವ್ರವಾಗಿ ಟೀಕಿಸಿದ್ದಾರೆ.

1975ರಲ್ಲಿ ಭಾರತವೇ ಬೇರೆ. ಈಗ ಇರುವ ಭಾರತವೇ ಬೇರೆ ಎನ್ನುವ ಮೂಲಕ ಪರೋಕ್ಷವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಹಾಡಿ ಹೊಗ ಳಿದ್ದಾರೆ, ಇದು ಕಾಂಗ್ರೆಸ್ ಹೈಕಮಾಂಡ್ ಕಣ್ಣು ಕೆಂಪಗೆ ಮಾಡಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಶಶಿ ತರೂರ್, ತುರ್ತು ಪರಿಸ್ಥಿತಿ ಹೇರಿಕೆ ಮಾಡಿದ್ದು ದೇಶದಲ್ಲಿ ಸ್ವಾತಂತ್ರ್ಯದ ಸವೆತ "ಮಾನವ ಹಕ್ಕುಗಳ ದುರುಪಯೋಗ ಎಂದು ತಮ್ಮದೇ ಪಕ್ಷದ ನಾಯಕತ್ವದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಪ್ರಾಜೆಕ್ಟ್ ಸಿಂಡಿಕೇಟ್ ಪ್ರಕಟಿಸಿದ ಲೇಖನದಲ್ಲಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ವಿಧಾನ ಸಾರ್ವಜನಿಕ ಜೀವನ ಭಯ ಮತ್ತು ದಮನದ ಸ್ಥಿತಿಗೆ ತಳ್ಳಿತ್ತು.ಇಂದಿನ ಭಾರತ, "1975ರ ಭಾರತವಲ್ಲ" ಎನ್ನುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಆಡಳಿತ ವೈಖರಿ ಹಾಡಿ ಹೊಗಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಆಡಳಿತ ವೈಖರಿಗಳನ್ನು ಆಗಾಗ ಸಾರ್ವಜನಿಕ ವೇದಿಕೆಯಲ್ಲಿ ಪ್ರಶಂಸಿಸುತ್ತಿರುವ ಶಶಿ ತರೂರು, ಪಕ್ಷದ ನಾಯಕತ್ವದೊಂದಿಗೆ ಪರೋಕ್ಷವಾಗಿ ವಾಕ್ಸಮರಕ್ಕಿಳಿದಿದ್ದಾರೆ.

ತುರ್ತು ಪರಿಸ್ಥಿತಿ ಮಾತ್ರ ಆಂತರಿಕ ಅವ್ಯವಸ್ಥೆ ಮತ್ತು ಬಾಹ್ಯ ಬೆದರಿಕೆ ಎದುರಿಸಲು ಮತ್ತು ಅಸ್ತವ್ಯಸ್ತವಾಗಿರುವ ದೇಶಕ್ಕೆ ಶಿಸ್ತು ಮತ್ತು ದಕ್ಷತೆಯನ್ನು ತರಲು ಸಾಧ್ಯವೇ ಎಂದಿರುವ ಅವರು 1975ರ ಜೂನ್ ನಿಂದ 1977ರ ಮಾರ್ಚ್ ರವರೆಗೆ ಸುಮಾರು ಎರಡು ವರ್ಷಗಳ ಕಾಲ ನಡೆದ ತುರ್ತು ಪರಿಸ್ಥಿತಿಯಲ್ಲಿ ನಾಗರಿಕ ಸ್ವಾತಂತ್ರ್ಯಗಳನ್ನು ಅಮಾನತುಗೊಳಿಸಲಾಯಿತು ಮತ್ತು ವಿರೋಧ ಪಕ್ಷದ ನಾಯಕರ ಮೇಲೆ ಕ್ರೂರ ದಮನ ನಡೆಸಲಾಯಿತು ಎಂದಿದ್ದಾರೆ.

ಪ್ರಜಾಪ್ರಭುತ್ವದ ಸ್ತಂಭಗಳನ್ನು ಹೇಗೆ ಮೌನಗೊಳಿಸಲಾಯಿತು ಮತ್ತು ಬಂಧನದಲ್ಲಿ ಚಿತ್ರಹಿಂಸೆ ಮತ್ತು ಕಾನೂನುಬಾಹಿರ ಹತ್ಯೆಗಳು ಹೇಗೆ ವ್ಯಾಪಕವಾಗಿವೆ ಎಂಬುದನ್ನು ಎತ್ತಿ ತೋರಿಸಿದ್ದು ಇದು ಆಡಳಿತವನ್ನು ಧಿಕ್ಕರಿಸಲು ಧೈರ್ಯಮಾಡಿದವರಿಗೆ "ಕರಾಳ ವಾಸ್ತವಗಳ" ಚಿತ್ರಣವಾಗಿದೆ ಎಂದಿದ್ದಾರೆ.

ಸುಪ್ರೀಂ ಕೋರ್ಟ್ ಹೇಬಿಯಸ್ ಕಾರ್ಪಸ್ ಮತ್ತು ನಾಗರಿಕರ ಸ್ವಾತಂತ್ರ್ಯದ ಹಕ್ಕನ್ನು ಅಮಾನತುಗೊಳಿಸುವುದನ್ನು ಎತ್ತಿಹಿಡಿದ ಕಾರಣ ನ್ಯಾಯಾಂಗ ಸಹ ಅಪಾರ ಒತ್ತಡಕ್ಕೆ ಒಳಗಾಗಿತ್ತು. ಅದೊಂದು ಕರಾಳ ಅಧ್ಯಾಯ ಎಂದು ಹೇಳಿದ್ದಾರೆ.

"ಪತ್ರಕರ್ತರು, ರಾಜಕೀಯ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಜೈಲಿಗೆ ಹಾಕಲಾಯಿತು. ವಿಶಾಲವಾದ ಸಾಂವಿಧಾನಿಕ ಉಲ್ಲಂಘನೆಗಳು ಮಾನವ ಹಕ್ಕುಗಳ ದುರುಪಯೋಗದ ಭಯಾನಕ ಪಟ್ಟಿಯನ್ನು ಸಾಧ್ಯವಾಗಿಸಿತು ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಸಂಜಯ್ ಗಾಂಧಿ ಅವರ ಉಲ್ಲೇಖಿಸಿದ ಶಶಿ ತರೂರ್ ಕೂಡ ಅಷ್ಟೇ ಕಟುವಾಗಿ ಮಾತನಾಡುತ್ತಾ, ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರ ಕ್ರಮಗಳನ್ನು "ಅನಿರ್ವಚನೀಯ ಕ್ರೌರ್ಯದ ಕೃತ್ಯಗಳು" ಎಂದು ಆರೋಪಿಸಿದ್ದಾರೆ.

# 5 ವರ್ಷ ಸಿದ್ದು ಸಿಎಂ: ಅಪ್ಪನ ಪರ ಪುತ್ರ ಬ್ಯಾಟಿಂಗ್



**ಮೈಸೂರು, ಜು. 10–** ಐದು ವರ್ಷ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎಂದು ಹೇಳುವ ಮೂಲಕ ಅಪ್ಪನ ಪರ ಪುತ್ರ ಯತೀಂದ್ರ ಸಿದ್ದರಾಮಯ್ಯ ಬ್ಯಾಟಿಂಗ್ ಮಾಡಿದ್ದಾರೆ.

ತಮ್ಮ ಪ್ರಕಾರ ಐದು ವರ್ಷ ಸಿದ್ದರಾಮಯ್ಯ ಅವರೇ ಅಧಿಕಾರದಲ್ಲಿ ಮುಂದುವರಿಯುತ್ತಾರೆ. ಸಿಎಂ ಬದಲಾವಣೆ ಚರ್ಚೆ ಹೈಕಮಾಂಡ್ ಮುಂದು ನಡೆದಿಲ್ಲ. ಈ ವಿಚಾರವನ್ನು ಎಐಸಿಸಿ ಕಾರ್ಯದರ್ಶಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದು ಮೈಸೂರಿನಲ್ಲಿಂದು ಸುದ್ಧಿಗಾರರೊಂದಿಗೆ ತಿಳಿಸಿದರು.

ಮುಖ್ಯಮಂತ್ರಿಯಾದವರನ್ನು ಒಬಿಸಿ ಸಮಿತಿಗೆ ನೇಮಕ ಮಾಡಿದರೆ ಅದು ಪ್ರಮೋಷನ್ನಾ ಎಂದು ಸಿಡಿಮಿಡಿಗೊಂಡರು. ಸಿದ್ದರಾಮಯ್ಯ ಅವರು ಹಿಂದುಳಿದ ನಾಯಕ. ದೇಶದಲ್ಲಿರುವ ಹಿಂದುಳಿದ ವರ್ಗಗಳ ನಾಯಕರು ಈ ಸಮಿತಿಯಲ್ಲಿದ್ದಾರೆ. ಹೀಗಾಗಿ ಅಲ್ಲಿ ಸದಸ್ಯರಾಗಿರುತ್ತಾರೆ. ಅದಕ್ಕೂ ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೂ ಸಂಬಂಧ ಕಲ್ಪಿಸುವ ಅಗತ್ಯವಿಲ್ಲ ಎಂದು ತಿರುಗೇಟು ನೀಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮುಖ್ಯಮಂತ್ರಿಗಳು ಬದಲಾಗುತ್ತಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಹಾಗೇಯೇ ಬಿಜೆಪಿ ಹೇಳುವುದನ್ನೆಲ್ಲಾ ನಂಬಿದ್ದರೆ ಆಗಲ್ಲ ಎಂದು ಪ್ರಶ್ನಿಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಹುದ್ದೆಗಳ ಮೇಲೆ ಕಣ್ಣಿಟ್ಟಿರುವರು ನಮ್ಮ ತಂದೆ ಎರಡೂವರೆ ವರ್ಷ ಪೂರೈಸುತ್ತಾರೆ ಎಂದು ಹೇಳುತ್ತಿದ್ದಾರೆ. ಸಿಎಂ ಆಸೆ ಇಟ್ಟುಕೊಂಡವರು ಈ ಹುದ್ದೆ ಕೇಡುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ಹೈಕಮಾಂಡ್ ಮತ್ತು ಶಾಸಕರು ಎಂದರು.

ಉಚಿತ ಭಾಗ್ಯಗಳಿಂದ ಜನರು ಸೋಮಾರಿಯಾಗುತ್ತಿದ್ದಾರೆ ಎಂಬ ರಂಭಾಪುರಿ ಶ್ರೀಗಳ ಹೇಳಿಕೆಗೆ ತಿರುಗೇಟು ನೀಡಿದ ಅವರು ಕಳೆದ ಭಾರಿ ಭಾಗ್ಯಗಳನ್ನು ಕೊಟ್ಟಾಗಲೂ ಇದೇ ರೀತಿ ಹೇಳಿಕೆ ನೀಡಿದ್ದರು. ಯಾರು ಸೋಮಾರಿಗಳು ಆಗಲ್ಲ. ಬಡವರು ಹೊಟ್ಟೆ ತುಂಬಾ ಊಟ ಮಾಡಿ ಸೋಮಾರಿ ಆಗುವುದಿಲ್ಲ. ಕೇವಲ ಅಕ್ಕಿ ಕೊಟ್ಟ ತಕ್ಷಣಕ್ಕೆ ಎಲ್ಲವೂ ಸಿಗುತ್ತಾ. ಜೀವನಕ್ಕಾಗಿ ಅವರು ದುಡಿಯುತ್ತಾರೆ ಎಂದು ಹೇಳಿದರು.

ಶ್ರೀಮಂತರ ಸಾಲಮನ್ನಾ ಮಾಡುವ ಕೇಂದ್ರಸರ್ಕಾರಕ್ಕೆ ರಂಭಾಪುರಿ ಶ್ರೀಗಳು ಈ ಪ್ರಶ್ನೆಯನ್ನು ಕೇಳಲಿ. ಆ ಸಂದರ್ಭದಲ್ಲಿ ಕೇಳದ ಶ್ರೀಗಳಿಗೆ ಬಡವರಿಗೆ ಭಾಗ್ಯ ಯೋಜನೆ ಕೊಟ್ಟಾಗ ಕಣ್ಣುರಿ ಏಕೆ? ಯಾರು ಎಷ್ಟೇ ಟೀಕೆ ಮಾಡಲಿ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

# ಆಸ್ತಿ ವಿಚಾರಕ್ಕೆ ಜಗಳ ತಂದೆ, ಅಣ್ಣ ಹತ್ಯೆ: ತಮ್ಮ ಸೆರೆ



**ಹಾಸನ,ಜು.10–**ಆಸ್ತಿ ವಿಚಾರಕ್ಕೆ ಉಂಟಾದ ವೈಷಮ್ಯದಿಂದ ರೊಚ್ಚಿಗೆದ್ದ ಮಗನೊಬ್ಬ ತಂದೆ ಹಾಗೂ ಅಣ್ಣ ಇಬ್ಬರನ್ನು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿರುವ ದಾರುಣ ಘಟನೆ ಹೊಳೆನರಸೀಪುರ ತಾಲೂಕಿನ ಗಂಗೂರು ಗ್ರಾಮದಲ್ಲಿ ನಡೆದಿದೆ.

ಗಂಗೂರು ಗ್ರಾಮದ ತಂದೆ ದೇವೇಗೌಡ (70) ಹಾಗೂ ಅಣ್ಣ ಮಂಜುನಾಥ್ (50) ನನ್ನು ಕೊಲೆಗೈದ ಮೋಹನ್ (47) ನನ್ನು ಪೊಲೀಸರು ಬಂಧಿಸಿದ್ದಾರೆ.


ಮಂಜುನಾಥ್ ಹಾಗೂ ಮೋಹನ್ ಇಬ್ಬರು ಅವಿವಾಹಿತರಾಗಿದ್ದರು. ಮಂಜುನಾಥ್, ತಂದೆ–ತಾಯಿಯೊಂದಿಗೆ ವಾಸವಿದ್ದರು. ಆದರೆ ಮೋಹನ್ ಒಂದೇ ಮನೆಯಲ್ಲಿದ್ದರೂ ಪ್ರತ್ಯೇಕವಾಗಿ ವಾಸವಿದ್ದನು.

ತಂದೆ ದೇವೇಗೌಡ, ಕೆಲ ದಿನಗಳ ಹಿಂದೆ ಆಸ್ತಿ ಮಾರಾಟ ಮಾಡಿದ್ದರು. ಆಸ್ತಿ ಮಾರಾಟ ಮಾಡಿದ ಹಣ ನೀಡಿಲ್ಲ ಎಂದು ಮೋಹನ್ ಗಲಾಟೆ ಮಾಡಿದ್ದ. ಇದೇ ವಿಚಾರವಾಗಿ ಕೋಪಗೊಂಡಿದ್ದ ಮೋಹನ್, ನಿನ್ನೆ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಕುಡಿದ ಮತ್ತಿನಲ್ಲಿ ಮನೆಯ ಗೋಡೆ ನೆಗೆದು, ಮಲಗಿದ್ದ ಅಣ್ಣನ ಮೇಲೆ ಮ ಚ್ಚಿನಿಂದ ಹಲ್ಲೆ ಮಾಡುತ್ತಿದ್ದ ತಡೆಯಲು ಬಂದ ತಂದೆ ದೇವೇಗೌಡ ಮೇಲೆಯೂ ಮಚ್ಚಿನಿಂದ ಹಲ್ಲೆ ಮಾಡಿದ್ದ. ಮಗನನ್ನು ತಡೆಯಲು ಬಂದ ತಾಯಿ ಜಯಮ್ಮನ ಮೇಲೂ ಮೋಹನ್ ಹಲ್ಲೆಗೆ ಯತ್ನಿಸಿದ್ದ. ಈ ವೇಳೆ ಜಯಮ್ಮ, ಮನೆಯಿಂದ ಹೊರಗೆ ಓಡಿಹೋಗಿ ಪ್ರಾಣ ಉಳಿಸಿಕೊಂಡು, ರಾತ್ರಿ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದರು.

ತಂದೆ ಹಾಗೂ ಸಹೋದರ ಕೊಲೆ ಮಾಡಿ ಮನೆಯ ಮತ್ತೊಂದು ಭಾಗದಲ್ಲಿ ಮೋಹನ್ ಮಲಗಿದ್ದ. ಬಳಿಕ ಅಪ್ಪ ಹಾಗೂ ಅಣ್ಣನನ್ನು ಕೊಲೆ ಮಾಡಿದ್ದೇನೆ. ನನಗೂ ಏಟಾಗಿದೆ ಬಂದು ಆಸ್ಪತ್ರೆಗೆ ಸೇರಿಸು ಎಂದು ಅಕ್ಕನಿಗೆ ಕರೆ ಮಾಡಿ ಮಾಹಿತಿ ನೀಡಿದ್ದ. ಇದರಿಂದ ಗಾಬರಿಗೊಂಡ ಸಹೋದರಿ ಊರಿಗೆ ಬಂದಿದ್ದರು.

ಘಟನಾ ಸ್ಥಳಕ್ಕೆ ಎಸ್ಪಿ ಮೊಹಮ್ಮದ್ ಸುಜೇತಾ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಕೊಲೆ ಮಾಡಿ ಮನೆಯಲ್ಲೇ ಮಲಗಿದ್ದ ಆರೋಪಿಯನ್ನು ಹೊಳೆನರಸೀಪುರ ಗ್ರಾಮಾಂತರ ಪೊಲೀಸರು ಬಂಧಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

# ಸುಳ್ಳು ಸುದ್ದಿ ತಡೆಗೆ ಮಸೂದೆ



**ಬೆಂಗಳೂರು, ಜು. 10–** ಸುಳ್ಳು ಸುದ್ದಿ ತಡೆಯಲು ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡನೆ ಮಾಡಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು. ದ್ವೇಷ ಭಾಷಣ ಕುರಿತಂತೆ ಕಾನೂನು ಇದೆ. ಇನ್ನಷ್ಟು ಕಠಿಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಅವರು ತಿಳಿಸಿದರು.

ಬೆಂಗಳೂರಿನಲ್ಲಿಂದು ಸುದ್ಧಿಗಾರರೊಂದಿಗೆ ಮಾತನಾಡಿದ ಅವರು ಮಂಗಳೂರಿನಲ್ಲಿ ಸರಣಿ ಕೊಲೆ ಹಿನ್ನೆಲೆಯಲ್ಲಿ ಶಾಂತಿ ಸ್ಥಾಪನೆ ಕುರಿತಂತೆ ವಿಶೇಷ ಕಾರ್ಯಪಡೆ ಸ್ಥಾಪಿಸಿದ್ದೇವೆ ಎಂದರು.

ಮಂಗಳೂರಿನಲ್ಲಿ ಶಾಂತಿ ನಡೆಸುವ ದೃಷ್ಟಿ ಯಿಂದ ನಿನ್ನೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಶಿಕ್ಷಣ ಹಾಗೂ ಸಂಘ ಸಂಸ್ಥೆಗಳು ಪ್ರತಿನಿಧಿಗಳು ಭಾಗವಹಿಸಿ ಅಗತ್ಯ ಸಲಹೆಗಳನ್ನು ನೀಡಿದ್ದಾರೆ. ಆ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.ಗೋಹತ್ಯೆಗೆ ಸಂಬಂಧಿಸಿದಂತೆ ಸಂಬಂಧಪಟ್ಟವರ ಜೊತೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತೇವೆ. ಯಾವುದೇ ಕಠಿಣ ಕ್ರಮ ಅವಕಾಶ ಕೊಡಬೇಡಿ. ಕಾನೂನು ಉಲ್ಲಂಘನೆಯಾದರೆ ಕಠಿಣ ಕ್ರಮಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.ಪ್ರಚೋದನಾತ್ಮಕ ಭಾಷಣಗಳೆ ಮಂಗಳೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಕೋಮು ಘರ್ಷಣೆಗೆ ಪ್ರಮುಖ ಕಾರಣವಾಗಿದೆ. ಇದರ ಜೊತೆಗೆ ಡ್ರಗ್ಸ್, ಮರಳುಮಾಫಿಯಾ, ಗೋಹತ್ಯೆಗಳಂತಹ ಅಹಿತಕರ ಘಟನೆಗಳಿಗೆ ಕಾರಣವಾಗಿದೆ ಎಂದು ಹೇಳಿದರು.

# ಜು.14ರಂದು ಕನ್ನಡ ಶಾಲೆಗಳು ಉಳಿಸಿ ಕರ್ನಾಟಕ ಉಳಿಸಿ ಹೋರಾಟ ಸತ್ಯಾಗ್ರಹ




**ಬೀದರ್,ಜು.10–** ಈ ತಿಂಗಳ 14ರಂದು ರಾಜ್ಯಾದ್ಯಂತ ಕನ್ನಡ ಶಾಲೆಗಳು ಉಳಿಸಿ ಕರ್ನಾಟಕ ಉಳಿಸಿ ಎಂಬ ಸಂಕಲ್ಪದೊಂದಿಗೆ 8 ಬೇಡಿಕೆಗಳು ಮುಂದಿಟ್ಟುಕೊಂಡು ಹೋರಾಟ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಕಲ್ಯಾಣ ಕರ್ನಾಟಕ ಅನುದಾನ ರಹಿತ ಶಾಸಗಿ ಶಾಲಾ ಅಡಳಿತ ಮಂಡಳಿ ಸಂಘದ ಗೌರವಾಧ್ಯಕ್ಷರು ಹಾಗೂ ಕನ್ನಡ ಸಂರಕ್ಷಣಾ ಸಮಿತಿ ಸಂಚಾಲಕ ರೇವಣಸಿದ್ದಪ್ಪ ಜಲಾದೆ ಹೇಳಿದರು.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯ ಸರ್ಕಾರ ಕನ್ನಡ ಶಾಲೆಗಳನ್ನು ಬಂದ್ ಮಾಡಿ, 5 ಲಕ್ಷ ಕನ್ನಡ ಮಾಸ್ತರ್‌ಗಳಿಗೆ ಸಂಚಕಾರ ತರಲು ಹೊರಟಿದೆ. ಪ್ರತಿ ವರ್ಷ ನವಿಕರಣ ಹೆಸರಲ್ಲಿ ಖಾಸಗಿ ಶಾಲೆಗಳಿಗೆ ಶೋಷಣೆ ಮಾಡಲಾಗುತ್ತಿದೆ. ರಾಜ್ಯದ ಶೇಕಡಾ 70 ಪ್ರತಿಶತ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಆದರೂ ಆ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಾಗಿ ಪರಿವರ್ತನೆ ಮಾಡಲು ಸರ್ಕಾರ ಹೊರಟಿದೆ. ಬರೀ ಸರ್ಕಾರಿ ಶಾಲೆ ಹೆಚ್ಚಸಿದರೆ ಸಾಲದು, ಮೌಲ್ಯುತ ಶಿಕ್ಷಣ ನೀಡುವ ವ್ಯವಸ್ಥೆ ಆಗಬೇಕು. ರಾಜ್ಯ ರಾಜ್ಯಧಾನಿ ಬೆಂಗಳೂರಲ್ಲಿ ಕೇವಲ 1 ಮಾತ್ರ ಕನ್ನಡ ಶಾಲೆ ಉಳಿದಿರುವುದು ದೊಡ್ಡ ದುರಂತ. ಪಾಲಕರಾದವರು ಬೇವಿನ ಬೀಜ ಬಿತ್ತಿ, ಮಾವಿನ ಹಣ್ಣು ನಿರಿಕ್ಷಿಸುವಂತಾಗಿದೆ ಈಗಿನ ಪರಿಸ್ಥಿತಿ ಎಂದು ಕಳವಳ ವ್ಯಕ್ತಪಡಿಸಿದರು.

ಬೀದರ್ ಜಿಲ್ಲೆಯಲ್ಲಿ ಈಗಾಗಲೇ 150 ಸರ್ಕಾರಿ ಕನ್ನಡ ಶಾಲೆಗಳು ಮುಚ್ಚಿವೆ. 100 ಕನ್ನಡ ಶಾಲೆಗಳು ಆಂಗ್ಲ ಮಾಧ್ಯಮ ಶಾಲೆಗಳಾಗಿ ಪರಿವರ್ತನೆಯಾಗಿವೆ. ಒಂದು ಸರ್ಕಾರಿ ಶಾಲೆಯಲ್ಲಿ ಸಹಾಯಕರಿಲ್ಲ. ಅಲ್ಲಿ ಮುಖ್ಯ ಗುರುವಿಗೆ ಲೆಕ್ಕ ಬರೆಯುವ ಕೆಲಸ ಮಾತ್ರ ಸೀಮಿತವಾಗಿದೆ. ಹೀಗಿರುವಾಗ ಗುಣಮಟ್ಟದ ಶಿಕ್ಷಣ ನಿರಿಕ್ಷಿಸಲು ಹೇಗೆ ಸಾಧ್ಯ? ಎಂದು ಪ್ರಶ್ನೆ ಮಾಡಿದರು.

14ರಂದು ರಾಜ್ಯಾದ್ಯಂತ ಹೋರಾಟಕ್ಕೆ ಕರೆ ಕೊಟ್ಟಿರುವುದರ ಜೊತೆಗೆ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ 52 ತಾಲೂಕುಗಳಲ್ಲಿ ನಮ್ಮ ಸಂಘದ ಆಯಾ ತಾಲೂಕು ಅಧ್ಯಕ್ಷರ ನೇತೃತ್ವದಲ್ಲಿ, ತಹಸಿಲ ಕಚೇರಿ ಎದುರು. ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ, ಕೈಗೆ ಕಪ್ಪು ಪಟ್ಟಿ ಧರಿಸಿ ಅಂದು ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 4 ಗಂಟೆ ವರೆಗೆ ಸತತ 5 ತಾಸು ಹೋರಾಟ ಹಮ್ಮಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿವಿಧ ಕನ್ನಡ[ರ ಸಂಘಟನೆಗಳು ಕೈ ಜೋಡಿಸಿರುವುದು ಸ್ವಾಗತಾರ್ಹ ಕ್ರಮ. ಈ ಹೋರಾಟ ರೂಪ ರೇಷ ಸಿದ್ದಪಡಿಸಲು ಕಳೆದ 15 ದಿವಸಗಳ ಹಿಂದೆ ಜಿಲ್ಲೆಯ 15 ಜನ ಖಾಸಗಿ ಶಾಲೆಗಳ ಅಡಳಿತ ಮಂಡಳಿ ಸದಸ್ಯರು ಶಿಕ್ಷಣ ತಜ್ಞರು ಬೆಂಗಳೂರಲ್ಲಿ ಉಳಿದು ಕನ್ನಡಪರ ಸಂಘಟನೆಗಳ ಮುಖ್ಯಸ್ಥರಾದ ವಾಟಾಳ ನಾಗರಾಜ, ನಾರಾಯಣಗೌಡ, ಕೆ.ಕುಮಾರ ಹಾಗೂ ಇತರರೊಂದಿಗೆ ಚರ್ಚಿಸಿ ಕನ್ನಡ ಶಾಲೆಗಳ ಉಳಿವಿಗಾಗಿ ಟೊಂಕ ಕಟ್ಟಿ ನಿಂತಿರುವುದಾಗಿ ಹೇಳಿದರು.

1995.ರ ನಂತರ ಪ್ರಾರಂಭದ ಅನುದಾನ ರಹಿತ ಖಾಸಗಿ ಶಾಲಾ ಕಾಲೇಜುಗಳಿಗೆ ಅನುದಾನ ನೀಡಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನವೀಕರಣ ಪ್ರಕ್ರಿಯೆ ಸರಳಗೊಳಿಸಬೇಕು, ಬಡ ಮಕ್ಕಳ ದಾರಿ ದೀಪವಾದ ಆರ್.ಟಿ.ಇ ಯೋಜನೆ ಖಾಸಗಿ ಶಾಲೆಗಳಿಗೆ ಮರು ಜಾರಿ ಮಾಡಬೇಕು, ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು, ರಾಜ್ಯದ್ಯಂತ ಜಾರಿ ಇರುವ ಕೋಚಿಂಗ್ ಸೆಂಟರ್ ಗಳನ್ನು ಬಂದು ಮಾಡಬೇಕು, 371( ಜೆ ) ಕಾನೂನಡಿ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಖಾಸಗಿ ಶಾಲೆಗಳಿಗೂ ವಿಸ್ತರಿಸಬೇಕು, ಕನ್ನಡ ಶಾಲೆಗಳನ್ನು ಉಳಿಸಿ, ಕನ್ನಡವನ್ನು ಉಳಿಸಬೇಕು, ಕರ್ನಾಟಕ ಪಬ್ಲಿಕ್ ಶಾಲೆ ಹೆಸರಿನ ಮೇಲೆ ಕನ್ನಡ ಮಾಧ್ಯಮ ಶಾಲೆಗಳನ್ನು ಆಂಗ್ಲ ಮಾಧ್ಯಮವಾಗಿ ರೂಪಾಂತರಗೊಳಿಸುತ್ತಿರುವ ಪ್ರಕ್ರಿಯೆ ನಿಲ್ಲಿಸಬೇಕು ಎಂಬಿತ್ಯಾದಿ ಬೆಡಿಕೆಗಳನ್ನು ಮುಂದಿಟ್ಟುಕೊಂಡು ಅಂದು ಜುಲೈ 14ರಂದು ಹೋರಾಟ ಸತ್ಯಾಗ್ರಹ ಹಮ್ಮಿಕೊಂಡಿದ್ದು, ಅಂದು ಈ ರಾಜ್ಯದ ಎಲ್ಲ ಕನ್ನಡಾಭಿಮಾನಿಗಳು ಈ ನಿಸ್ವಾರ್ಥ ಹೋರಾಟಕ್ಕೆ ಕೈ ಜೋಡಿಸುವಂತೆ ಜಲಾದೆ ಕರೆ ಕೊಟ್ಟರು.

ಕಲ್ಯಾಣ ಕರ್ನಾಟಕ ಅನುದಾನ ರಹಿತ ಶಾಸಗಿ ಶಾಲಾ ಅಡಳಿತ ಮಂಡಳಿ ಸಂಘದ ಜಿಲ್ಲಾಧ್ಯಕ್ಷ ರಾಜೇಂದ್ರ ಮಣಗೀರೇ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ, ಜಿಲ್ಲಾ ಉಪಾಧ್ಯಕ್ಷ ಮಾಣಿಕಪ್ಪ ಗೋರನಾಳೆ, ಬೀದರ್ ತಾಲೂಕಾಧ್ಯಕ್ಷ ಸಂದೀಪ ಶಟಕಾರ, ಬೀದರ್ ದಕ್ಷಿಣ ವಿಭಾಗದ ಅಧ್ಯಕ್ಷ ಸಯ್ಯದ್ ಅಹಮ್ಮದ್ ಮುದ್ದೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಶಿವಶಂಕರ ಟೋಕರೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ಯುವ ಮಾರ್ಗ



## ಬಿಸಿಎಂ ಹಾಸ್ಟೆಲ್‌ನಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಣೆ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.10–** ಪಟ್ಟಣದ ಹುಲಿಗುಡ್ಡದಲ್ಲಿ ಇರುವ ಬಿಸಿಎಂ ಮೆಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ಶಿವಶರಣ ಹಡಪದ ಅಪ್ಪಣ್ಣ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಾರ್ಡನ್ ಭೀಮಣ್ಣ ವಜ್ಜಲ್, ಸಿಬ್ಬಂದಿಗಳಾದ ಹನಮೇಶ ಸೇರಿ ಹಾಸ್ಟೆಲ್ ವಿದ್ಯಾರ್ಥಿಗಳು ಇದ್ದರು.

## ಕಾನೂನು ಪದವೀಧರರಿಂದ ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಜು.10–**ಇಲ್ಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25 ನೇ ಸಾಲಿನ ಪರಿಶಿಷ್ಟ ಜಾತಿಯ ಕಾನೂನು ಪದವೀಧರರನ್ನು ವೃತ್ತಿ ತರಬೇತಿಗೆ ಮಾಸಿಕ ಶಿಷ್ಯ ವೇತನಕ್ಕೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಾನೂನು ಪದವೀಧರರಿಗೆ ಮಾಸಿಕ ಶಿಷ್ಯ ವೇತನಕ್ಕೆ ಅರ್ಜಿ ಸಲ್ಲಿಸಲು ವರ್ಷದ ಎಲ್ಲಾ ದಿನಗಳು (365 ದಿನಗಳು) ಅವಕಾಶ ಕಲ್ಪಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜುಲೈ 01ರಿಂದಲೇ ವರ್ಷದ ಎಲ್ಲಾ ದಿನಗಳು (365) ಆನ್‌ಲೈನ್ ಮೂಲಕ ಇಲಾಖೆಯ ವೆಬ್‌ಸೈಟ್ ವಿಳಾಸ: www.sw.kar.nic.in ನಲ್ಲಿ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಕ್ಷಕಿಯ ಚಿನ್ನದ ಚೈನ್ ಕಿತ್ತು ಪರಾರಿ

**ಕಲಬುರಗಿ,ಜು.10–** ಸ್ಕೂಟಿ ಮೇಲೆ ಹೋಗುತ್ತಿದ್ದ ಶಿಕ್ಷಕಿಯೊಬ್ಬರ ಕೊರಳಲ್ಲಿನ ಸುಮಾರು 75000ರೂ.ಗಳ ಮೌಲ್ಯದ 7.5 ಗ್ರಾಮ್ ತೂಕದ ಬಂಗಾರದ ಚೈನನ್ನು ಹಿಂಬದಿಯಿಂದ ಬಂದ ಇಬ್ಬರು ದ್ವಿಚಕ್ರವಾಹನ ಸವಾರರು ಕಿತ್ತುಕೊಂಡು ಪರಾರಿಯಾದ ಘಟನೆ ನಗರದ ಜೇವರ್ಗಿ ರಸ್ತೆಯ ಹೊರಸೇತುವೆಯ ಬಳಿ ಸೋಮವಾರ ರಾತ್ರಿ 9–10 ಗಂಟೆಗೆ ವರದಿಯಾಗಿದೆ.ವಿವೇಕಾನಂದ ವಿದ್ಯಾನಿಕೇತನ ಶಾಲಾ ಶಿಕ್ಷಕಿ ಹಾಗೂ ಓಜಾ ಲೇಔಟ್‌ನ ಶ್ರೀಗುರು ಕಾಲೇಜು ಹತ್ತಿರದ ನಿವಾಸಿ ಕು. ಸುಮಾ ತಂದೆ ಸಿದ್ದಪ್ಪ ಭಗವತಿ ಅವರೇ ಚಿನ್ನದ ಚೈನು ಕಳೆದುಕೊಂಡಿದ್ದಾರೆ.

# ಸಮಯಕ್ಕೆ ಬಾರದ ಬಸ್ ವಿದ್ಯಾರ್ಥಿಗಳ ಪರದಾಟ, ಅಧಿಕಾರಿಗಳಿಗೆ ಚೆಲ್ಲಾಟ...??

■ ಹನುಮಂತ ಕನ್ನಾಳ

ಲಿಂಗಸುಗೂರು,ಜು.10–ಶಾಲಾ ಸಮಯಕ್ಕೆ ಬಾರದ ಬಸ್ ಗಳು ಇಲ್ಲದೇ ಸಾಕಷ್ಟು ವಿದ್ಯಾರ್ಥಿಗಳು ತರಗತಿ ಕಳೆದುಕೊಂಡ ಉದಾಹರಣೆಗಳು ಇವೇ ಹಾಗೇ ಸಂಜೆ ಕೂಡ ಊರಿಗೆ ತೆರಳಲು ಬಸ್ ಇಲ್ಲದೇ ದಿನಾಲು ಬಸ್ ನಿಲ್ದಾಣದಲ್ಲಿ ಕಂಟ್ರೋಲ್ ರ್ ಜೊತೆ ವಾಗ್ವಾದ ನಡೆಯುತ್ತದೆ ಇದರಿಂದ ಶಾಲಾ ಮಕ್ಕಳ ಗೋಳು ಯಾರು ಕೇಳದಂತಾಗಿದೆ.

ದಿನಾಲು ನಸುಕಿನಲ್ಲೆದ್ದು ಗ್ರಾಮೀಣ ಪ್ರದೇಶದಿಂದ ಸಾವಿರಾರು ವಿದ್ಯಾರ್ಥಿಗಳು ಲಿಂಗಸಗೂರು ಪಟ್ಟಣಕ್ಕೆ ಶಾಲೆ–ಕಾಲೇಜಿಗೆ ಅಭ್ಯಾಸ ಮಾಡಲು ಬರುತ್ತಾರೆ. ಸಕಾಲಕ್ಕೆ ಬಸ್ಸುಗಳು ಸಿಗದೇ ಮರಳಿ ಊರಿಗೆ ತೆರಳಲು ಒದ್ದಾಡುತ್ತಾರೆ. ಇದು ಹೆಚ್ಚುಕಮ್ಮಿ ನಿತ್ಯದ ಸಂಗತಿ. ಆದರೆ, ಅರ್ಧಗಂಟೆ ಆಚೀಚೆ ಬರುವ ಬಸ್ಸು ಸುಮಾರು ಹೊತ್ತಾದರೂ ಬಾರದೇ ಇದ್ದಾಗ, ಕಂಟ್ರೋಲರ್ ಬಳಿಗೆ ತೆರಳಿ ವಿಚಾರಿಸಿದ್ದಾರೆ. ಆಗ ಏಕಾಏಕಿ ಸಿಟ್ಟಿಗೆದ್ದ ಕಂಟ್ರೋಲರ್ ಸಾಹೇಬರು ಮಾತ್ರ ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ್ದಾರೆ. 'ಬಸ್ ಬಂದಾಗ ಹೋಗಬೇಕು ಯಾಕೆ ಯಾವಾಗ ಬರುತ್ತದೆ ಎಂದು ಕೇಳಬಾರದು. ಅಷ್ಟು ಬೇಕಿದ್ದರೆ ಡಿಪೋಗೆ ಹೋಗಿ ಕೇಳಿ' ಎಂದು ವಿದ್ಯಾರ್ಥಿಗಳಿಗೆ ಕಂಟ್ರೋಲರ್ ಗದರಿದರು.

ಕಂಟ್ರೋಲರ್ ಮಾತಿಗೆ ವಿದ್ಯಾರ್ಥಿಗಳೂ ಸಿಟ್ಟಿಗೆದ್ದಾಗ ವಾಗ್ವಾದ ನಡೆಯಿತು. ಬಸ್‌ಗಳ ಕೊರತೆ ಇರುವ ಕಾರಣ ತಾಲೂಕಿನ ಹಟ್ಟಿ ಮಾವಿನಭಾವಿ, ನಾಗರಹಾಳ, ಜೂಲಗುಡ್ಡ, ಹಲ್ಕಾವಟಗಿ, ಚಿತ್ತಾಪೂರ, ಗುಡದನಾಳ, ಮಸ್ಕಿ ಪ್ರಸಂಗಗಳು ಜರುಗುತ್ತವೆ. ಕೂಡಲೇ ಸಾರಿಗೆ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಮುಂದಾಗಬೇಕಿದೆ. ತಾಲೂಕಿನ ಸರ್ಜಾಪೂರ, ಪಾಮನಕಲ್ಲೂರು ಸೇರಿ ಗ್ರಾಮೀಣ ಪ್ರದೇಶಕ್ಕೆ ತೆರಳುವ ಮಾರ್ಗಗಳಿಗೆ ನಿತ್ಯ ಸಂಜೆಯಾದರೆ ಸಾಕು ವಿದ್ಯಾರ್ಥಿಗಳು ಪರದಾಡುತ್ತಾರೆ. ಗಂಟೆಗಟ್ಟಲೇ ಬಸ್ಟಾಂಡಲ್ಲೇ ಕಾಲ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರತಿದಿನವೂ ಊರಿಂದ ಬರುವಾಗ ಮತ್ತು ಹೋಗುವಾಗ ಸಕಾಲಕ್ಕೆ ಬಸ್‌ಗಳ ವ್ಯವಸ್ಥೆ



ಇರುವುದಿಲ್ಲ. ಇದರಿಂದ ಅಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಸಾರಿಗೆ ಅಧಿಕಾರಿಗಳನ್ನ ಕೇಳಿದರೆ ಗದರುತ್ತಾರೆ. ಮನೆ ಮುಟ್ಟಲು ರಾತ್ರಿಯಾಗುತ್ತದೆ. ಕೂಡಲೇ ಅಧಿಕಾರಿಗಳು ಇತ್ತ ಮುತುವರ್ಜಿವಹಿಸಬೇಕು ವಿದ್ಯಾರ್ಥಿಗಳು ಆಶೆಯಾಗಿದೆ.

ಬಸ್ ಡಿಪೋ ವ್ಯವಸ್ಥಾಪಕರಿಗೆ ಸಾಕಷ್ಟು ಮನವಿ ಸಲ್ಲಿಸಿದರು ಕೂಡ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮಕ್ಕಳಿಗೆ ವಿದ್ಯಾಭ್ಯಾಸ ತೊಂದರೆಯಾಗುತ್ತದೆ ಇದನ್ನು ಮನಗಂಡು ಸಂಬಂಧಪಟ್ಟ ಅಧಿಕಾರಿಗಳು ಮಕ್ಕಳಿಗೆ ಅನುಕೂಲವಾಗುವಂತೆ ಮಾಡಬೇಕು.

–ಆಂಜನೇಯ ಭಂಡಾರಿ,ಕರವೇ ತಾಲ್ಲೂಕು ಅಧ್ಯಕ್ಷ



# ಪತಂಜಲಿ ಯೋಗ ಸಮಿತಿಯಿಂದ ಗುರುಪೂರ್ಣಿಮೆ'ತಾಯಿಯೇ ಮೊದಲ ಗುರು, ಮನೆಯಲ್ಲೇ ಕಲಿಸಿ ಸಂಸ್ಕಾರ'

**ಹೊಸಪೇಟೆ,ಜು.10–** 'ತಾಯಿಯೇ ಮೊದಲ ಗುರು. ತಂದೆ, ತಾಯಿ ಮನೆಯಲ್ಲಿ ಕಲಿಸುವ ಸಂಸ್ಕಾರವೇ ಮಕ್ಕಳಿಗೆ ಬಹಳ ಮುಖ್ಯವಾಗಿರುತ್ತದೆ. ಇದನ್ನು ಪ್ರತಿಯೊಬ್ಬರೂ ತಿಳಿದುಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ' ಎಂದು ನಿವೃತ್ತ ಪ್ರಾಚಾರ್ಯ ಪ್ರೊ.ಅರವಿಂದ ಕುಲಕರ್ಣಿ ಹೇಳಿದರು.

ಪತಂಜಲಿ ಯೋಗ ಸಮಿತಿ ಜನನಿ ವಿವಿದ್ಧೋದೇಶ ಸಹಕಾರಿ ಸಂಘದ ಸಹಯೋಗದಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಆಯೋಜಿಸಿದ್ದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ವೇದವ್ಯಾಸರು ಮಹಾನ್ ಗುರುಗಳಾಗಿದ್ದವರು. ಅಖಂಡವೂ, ಅನಂತವೂ ಆದ ವೇದರಾಶಿಯನ್ನು ಮನುಕುಲದ ಒಳಿತಿಗಾಗಿ ವಿಭಾಗ ಮಾಡಿದವರು ಅವರು. ವೇದದ ಸಾರ ಮತ್ತಷ್ಟು ಸುಲಭವಾಗಿ ಜನತೆಗೆ ಸಿಗಬೇಕೆಂಬ ಚಿಂತನೆಯಲ್ಲಿ ಅವರು 18 ಪುರಾಣಗಳನ್ನು ಹಾಗೂ ಮಹಾಭಾರತವನ್ನು ರಚಿಸಿದರು' ಎಂದು ಅವರು ಹೇಳಿದರು.



# ಬ್ಯಾಂಕಿನ ಸಾಲಕ್ಕೆ ಸರ್ಕಾರದ ಸಹಾಯಧನ ಕಡಿತಗೊಳಿಸಿದರೆ ಕ್ರಮ

ಯುವ ಮಾರ್ಗ ಸುದ್ದಿ

**ರಾಯಚೂರು,ಜು.10–**ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ತಮಗೆ ಗ್ಯಾರಂಟಿ ಯೋಜನೆಯ ಗೃಹಲಕ್ಷ್ಮೀ ಯೋಜನೆಯ 2000 ರೂ.ಗಳ ಹಣ ಜಮಾ ಆದರು ಸಹ ಬ್ಯಾಂಕಿನವರು ನೀಡುತ್ತಿಲ್ಲ. ಇದುವರೆಗೆ 45,000 ಹಣ ಜಮಾ ಆಗಿದ್ದು ಬ್ಯಾಂಕಿನ ಅಧಿಕಾರಿಗಳು ಬ್ಯಾಂಕಿನ್ ಲೋನ್‌ಗೆ ಕಡಿತ ಮಾಡಿ ಅನ್ಯಾಯ ಮಾಡುತ್ತಿದ್ದಾರೆ ಎಂದು ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಯೊಬ್ಬರು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಗೆ ತಿಳಿಸಿದ ವಿಷಯವನ್ನು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಸದಸ್ಯರಾದ ಬಸವರಾಜ ಹೆಚ್.ಪಿ ಅವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಎಲ್ಲ ಸದಸ್ಯರು ಸುಧೀರ್ಘ ಚರ್ಚಿಸಿದರು.

ಗ್ಯಾರಂಟಿ ಯೋಜನೆಯ ಗೃಹಲಕ್ಷ್ಮೀ ಸೇರಿದಂತೆ ಇನ್ನಿತರ ಯೋಜನೆಗಳ ಹಾಗೂ ವಿದವಾ ವೇತನ, ವಿಕಲಚೇತನ ವೇತನ, ವೃದ್ದಾಪ್ಯ ವೇತನ ಸೇರಿದಂತೆ ಯಾವುದೇ ಸಾಮಾಜಿಕ ಭದ್ರತಾ ಯೋಜನೆಯಡಿ ಸರ್ಕಾರ ನೀಡುವ ಸಹಾಯಧನವು ನೇರವಾಗಿ ಸಕಾಲಕ್ಕೆ ಅರ್ಹ ಫಲಾನುಭವಿಗಳಿಗೆ ಸಿಗಲೇಬೇಕು. ಫಲಾನುಭವಿಯು ಬ್ಯಾಂಕಿನಲ್ಲಿ ಸಾಲ ಮಾಡಿದ್ದಾರೆ ಎಂದಾಕ್ಷಣ ಸಹಾಯಧನದ ಮೊತ್ತವನ್ನು ಬ್ಯಾಂಕಿನ ಸಾಲದಲ್ಲಿ ಕಡಿತಗೊಳಿಸುವುದು ತಪ್ಪಾಗುತ್ತದೆ ಎಂದು ಎಲ್ಲ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಯ ಗೃಹಲಕ್ಷ್ಮೀ ಸಹಾಯಧನ ಸೇರಿದಂತೆ ಯಾವುದೇ ರೀತಿಯ ಸಾಮಾಜಿಕ ಭದ್ರತಾ ಯೋಜನೆಯ ಸಹಾಯಧನವನ್ನು ಇನ್ಮುಂದೆ ಯಾವುದೇ ಬ್ಯಾಂಕುಗಳಲ್ಲಿ ಸಾಲದ ಹಣಕ್ಕೆ ಕಡಿಗೊಳಿಸಿದಲ್ಲಿ ಸಂಬಂಧಿಸಿದ ಶಾಖಾ ಮ್ಯಾನೇಜರ್ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ನಿರ್ಣಯವಾಗಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ತಿಳಿಸಿದರು. ಈ ಅಭಿಪ್ರಾಯಕ್ಕೆ ಸದಸ್ಯರು ಸಹಮತ ವ್ಯಕ್ತಪಡಿಸಿ, ಅಂತಿಮವಾಗಿ ಎಲ್ಲ ಬ್ಯಾಂಕುಗಳಿಗೆ ಈ ಸಭೆಯ ನಿರ್ಣಯದ ವಿಷಯವನ್ನು ಜಾರಿ ಮಾಡಿ ಕ್ರಮವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಇದು ಅತ್ಯಂತ ಗಂಭೀರವಾದ ವಿಷಯವಾಗಿದೆ. ಈ ಬಗ್ಗೆ ವಿವಿಧ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಜಿಲ್ಲಾ ಪಂಚಾಯತ್

ಸಿಇಓ ಅವರಿಗೆ ಮಾಹಿತಿ ನೀಡಬೇಕು. ತಾವು ಸಹ ಹಣಕಾಸು



ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡುವುದಾಗಿ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ತಿಳಿಸಿದರು.

ಗ್ಯಾರಂಟಿ ಯೋಜನೆಯ ಗೃಹಲಕ್ಷ್ಮೀ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಸರ್ಕಾರ ನೀಡುವ ಸಹಾಯಧನವನ್ನು ಬ್ಯಾಂಕಿನ ಅಧಿಕಾರಿಗಳು ಲೋನ್ ಹಣಕ್ಕೆ ಕಟ್ ಮಾಡುವುದು ಅಕ್ಷಮ್ಯವಾಗಿದೆ. ಈ ಬಗ್ಗೆ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯು ತೆಗೆದುಕೊಂಡ ನಿರ್ಣಯವು ಲೀಡ್ ಬ್ಯಾಂಕಿನಿಂದ ಎಲ್ಲ ಬ್ಯಾಂಕುಗಳ ಎಲ್ಲ ಶಾಖೆಗಳಿಗೆ ವಾರದೊಳಗೆ ತಲುಪಲು ಕ್ರಮ ವಹಿಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಸದಸ್ಯರಾದ ಪವನ ಕಿಶೋರ್ ಪಾಟೀಲ ಅವರು ಲೀಡ್ ಬ್ಯಾಂಕಿನ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿಗಳಿಗೆ ನೋಟೀಸ್ ಜಾರಿಗೆ ನಿರ್ಣಯ: ಗೃಹಲಕ್ಷಿ ಯೋಜನೆಯ ಕುರಿತು ತಾಲೂಕುವಾರು, ಹೋಬಳಿವಾರು ಹಾಗೂ ಗ್ರಾಮವಾರು ಸಭೆಗಳನ್ನು ನಡೆಸಲು ತಿಳಿಸಿದಾಗ್ಯೂ ಸಭೆಗಳು ನಡೆಸಿದ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡುತ್ತಿಲ್ಲ. ತಮ್ಮ ಕೆಳಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ಕ್ರಮವಹಿಸಲು ಜಿಲ್ಲಾಮಟ್ಟದ ಅಧಿಕಾರಿಗಳು ಮುಂದಾಗದೇ ಅಸಹಾಯಕರಂತೆ ವರ್ತಿಸಬಾರದು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಬಿ.ಕೆ.ಅಂಬರಿಷಪ್ಪ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತಾಲೂಕುವಾರು, ಹೋಬಳಿವಾರು ಹಾಗೂ ಗ್ರಾಮವಾರು ಸಭೆ ಮಾಡುವಾಗ ಸಂಬಂಧಪಟ್ಟ ಅಧ್ಯಕ್ಷರು ಹಾಗೂ ಸದಸ್ಯರ ಗಮನಕ್ಕೆ ತರಬೇಕು. ಇಲ್ಲದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಬೇಕು. ಸಭೆಗೆ ಸರಿಯಾದ ಮಾಹಿತಿ ನೀಡಬೇಕು ಎಂದು ಹಿಂದಿನ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ತಿಳಿಸಲಾಗಿತ್ತು. ಆದಾಗ್ಯೂ ತಾಲೂಕುವಾರು, ಹೋಬಳಿವಾರು ಹಾಗೂ ಗ್ರಾಮವಾರು ಸಭೆಗಳು ನಡೆಯುತ್ತಿಲ್ಲ ಎಂಬುದನ್ನು ಸಹಿಸಲಾಗುವುದಿಲ್ಲ ಎಂದು ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ತಿಳಿಸಿದರು.

ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ತಾಲೂಕುಮಟ್ಟದ ಅಧಿಕಾರಿಗಳಿಗೆ ತಾವು ತಿಳಿಸಿದಾಗ್ಯೂ ಅವರು ಸ್ಪಂದನೆ ಮಾಡುತ್ತಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಸಭೆಗೆ ತಿಳಿಸಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿದೆ. ಇದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ ಎಂದು ಎಲ್ಲ ತಾಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಎಂದು ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು.

ತಾಪಂ ಇಓ ಹಾಜರಾತಿಗೆ ಠರಾವು: ಜನರಿಗೆ ಅನುಕೂಲವಾಗಲು ರಾಜ್ಯ ಸರ್ಕಾರವು ರೂಪಿಸಿರುವ ಎಲ್ಲಾ ಗ್ಯಾರಂಟಿ ಯೋಜನೆಗಳು ಸರಿಯಾಗಿ ಅನುಷ್ಠಾನವಾಗಬೇಕೆಂದೇ ಸರ್ಕಾರ ಈ ಬಗ್ಗೆ ಮೇಲ್ವಿಚಾರಣೆ ಮಾಡಲು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಗಳನ್ನು ರಚಿಸಿದೆ. ಈ ಸಮಿತಿಯಲ್ಲಿ ಚರ್ಚೆಯಾಗುವ ವಿಷಯಗಳ ಬಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ತಾಲೂಕು, ಹೋಬಳಿ, ಗ್ರಾಮ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತಿಳಿಸಬೇಕು. ಅಂದಾಗ ಮಾತ್ರ ಸಭೆ ನಡೆಸಿ ಚರ್ಚೆ ನಡೆಸಿದ್ದಕ್ಕೆ ಸಾರ್ಥಕವಾಗುತ್ತದೆ. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯವಾಗುವ ವಿಷಯಗಳ ಬಗ್ಗೆ ತಾಲೂಕು ಅಧಿಕಾರಿಗಳಿಗೆ ತಿಳಿಯಬೇಕಾದಲ್ಲಿ ಈ ಸಭೆಗೆ ಎಲ್ಲ ತಾಲೂಕಿನ ತಾಲೂಕು ಪಂಚಾಯತ್ ಕಾರ್ಯನಿರ್ವಹಕ ಅಧಿಕಾರಿಗಳು ಸಹ ಬರಬೇಕಾಗುತ್ತದೆ. ಇನ್ಮುಂದೆ ಜಿಲ್ಲಾ ಕೇಂದ್ರದಲ್ಲಿ ನಡೆಯುವ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆಗಳಿಗೆ ಕಡ್ಡಾಯವಾಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸಹ ಭಾಗಿಯಾಗಲು ಈ ಸಭೆಯಲ್ಲಿ ಠರಾವು ಪಾಸು ಮಾಡಬೇಕು ಎಂದು ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ತಿಳಿಸಿದರು. ಇದಕ್ಕೆ ಸಭೆಯಲ್ಲಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಎಲ್ಲ ಸದಸ್ಯರು ಒಪ್ಪಿಗೆ ಸೂಚಿಸಿದರು. ಸಭೆಯಲ್ಲಿ ಅಂತಿಮವಾಗಿ ತಾಲೂಕು ಪಂಚಾಯತ್ ಇಓ ಅವರ ಹಾಜರಾತಿಗೆ ನಿರ್ಣಯ ಮಾಡಲಾಯಿತು.

ತಾಲೂಕುಮಟ್ಟದಲ್ಲಿ ಸಹ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಸಭೆಗಳು ನಿಯಮಿತವಾಗಿ ನಡೆಯಬೇಕು. ಹೋಬಳಿ ಮತ್ತು ಗ್ರಾಮಮಟ್ಟದ ಅಧಿಕಾರಿಗಳಿಂದ ತಾಲೂಕುಮಟ್ಟದ ಅಧಿಕಾರಿಗಳು ಸರಿಯಾಗಿ ಮಾಹಿತಿ ಪಡದು ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿಯ ಉಪಾಧ್ಯಕ್ಷರಾದ ಹನುಮಂತಪ್ಪ ಜಾಲಿಬೆಂಚಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಯಾ ತಾಲೂಕುಗಳಲ್ಲಿ ಯಾವ ಯಾವ ಕಡೆಗೆ ನ್ಯಾಯಬೆಲೆ ಅಂಗಡಿಗಳಿವೆ. ಯಾವ ಸಮಯಕ್ಕೆ ರೇಷನ್ ನೀಡುತ್ತಾರೆ ಎಂಬುದರ ಬಗ್ಗೆ ನ್ಯಾಯಬೆಲೆ ಅಂಗಡಿಗಳಿಂದ ಮಾಹಿತಿ ಇಲ್ಲ. ನ್ಯಾಯಬೆಲೆ ಅಂಗಡಿಕಾರರು ಮನಸಿಗೆ ಬಂದಂತೆ ರೇಷನ್ ಹಂಚುತ್ತಾರೆ. ಯಾವುದೇ ಸರ್ಕಾರದ ಯೋಜನೆಗಳ ಲಾಭವು ಸಾರ್ವಜನಿಕರಿಗೆ ಸಮರ್ಪಕವಾಗಿ ದೊರೆಯಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಈ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಸಮಿತಿಯ ಉಪಾಧ್ಯಕ್ಷರಾದ ಗಫೂರ್‌ಸಾಬ್ ಅವರು ಸೂಚನೆ ನೀಡಿದರು.ಕೆಲವು ಕಡೆಗಳಲ್ಲಿ ಸರಿಯಾದ ಬೀದಿದೀಪಗಳ ವ್ಯವಸ್ಥೆ ಇಲ್ಲ. ಇನ್ನು ಕೆಲವು ಕಡೆ ಅಪಾಯಕಾರಿ ರೀತಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ಕೆಳಗಡೆ ಹಾಕಲಾಗಿದೆ. ಈ ಬಗ್ಗೆ ಜೆಸ್ಕಾಂ ಅಧಿಕಾರಿಗಳು ಪರಿಶೀಲಿಸಬೇಕು ಎಂದು ಸಮಿತಿಯ ಉಪಾಧ್ಯಕ್ಷರಾದ ನಾಗೇಂದ್ರ ಮಠಮಾರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.ಕೆಲವು ತಾಲೂಕುಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಸರಿಯಾದ ರೀತಿಯಲ್ಲಿ ಸಾರ್ವಜನಿಕರಿಗೆ ವಿತರಣಾ ವ್ಯವಸ್ಥೆ ಇಲ್ಲ. ಕೆಲವು ಕಡೆ ಸರಿಯಾದ ಬಸ್ಸಿನ ವ್ಯವಸ್ಥೆ ಇಲ್ಲ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸಬೇಕು ಎಂದು ಸದಸ್ಯರಾದ ಮೆಹಬೂಬಸಾಬ್ ಮುದ್ದಾಪುರ ಅವರು ಸಲಹೆ ಮಾಡಿದರು.ಯೋಜನೆಗಳ ಪ್ರಗತಿ; ಗೃಹಲಕ್ಷ್ಮೀ ಯೋಜನೆಯ ಸಹಾಯಧನವನ್ನು ಸಕಾಲಕ್ಕೆ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆ. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,52,582 ಫಲಾನುಭವಿಗಳಿಗೆ 301.08 ಕೋಟಿ ರೂ. ವೆಚ್ಚ ಭರಿಸಲಾಗಿದೆ. ಶಕ್ತಿ ಯೋಜನೆಯಡಿ ಇದುವರೆಗೆ 253.23 ಕೋಟಿ ರೂ. ವೆಚ್ಚ ಭರಿಸಲಾಗಿದೆ. ಯುವನಿಧಿ ಯೋಜನೆಯಡಿ ಜಿಲ್ಲೆಯಾದ್ಯಂತ ಒಟ್ಟು 107432 ಪದವಿ ಹಾಗೂ 896 ಡಿಪ್ಲೋಮಾ ಪೂರ್ಣಗೊಳಿಸಿದ ನೋಂದಾಯಿತ ಫಲಾನುಭವಿಗಳ ಖಾತೆಗೆ ಸಹಾಯಧನ ವರ್ಗಾಯಿಸಲಾಗಿದೆ ಎಂದು ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H